# ದಿನಾಂಕ: 06–10–2023 ರಂದು ಜರುಗಲಿರುವ ಸಿಂಡಿಕೇಟ ಸಭೆಯ ಪೂರ್ವಭಾವಿ ವಿಷಯಪಟ್ಟಿ

## ಕಲಂ ಸಂಖ್ಯೆ: 01 ರಿಂದ 08



**ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ**

**ದಿನಾಂಕ: 06/10/2023 ರಂದು ಜರುಗಲಿರುವ ಸಿಂಡಿಕೇಟ ಸಭೆಯ ಪೂರ್ವಬಾವಿ ವಿಷಯ ಪಟ್ಟಿ**

| Agenda No | Subject | Page no. from | Page no. to |
|---|---|---|---|
| 1) | ದಿನಾಂಕ: 28.07.2023ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ. | ಪ್ರತಿ ಲಗತ್ತಿಸಿದೆ. | |
| | ದಿನಾಂಕ: 02.09.2023ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ನಡುವಳಿಗಳನ್ನು ದೃಢೀಕರಿಸುವ ಕುರಿತು | ಈಗಾಗಲೇ ಪೂರೈಸಲಾಗಿದೆ. | |
| | **ಸಿಆಸು (ಶಿಕ್ಷಕೇತರ) ವಿಭಾಗ** | | |
| 2) | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿದ್ದ ಗ್ರೂಪ್ 'ಡಿ' ಎಂದು ನೇಮಕಾತಿ ಹೊಂದಿ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಪಡೆದ ಸಿಬ್ಬಂದಿಗಳಿಗೆ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡ ದಿನಾಂಕದಿಂದಲೇ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗು ವೇತನ ಶ್ರೇಣಿಯನ್ನು ವಿಸ್ತರಿಸದೇ ಇರುವ ಪರಿಣಾಮವಾಗಿ ತದನಂತರ ನೇರವಾಗಿ ಕಿರಿಯ ಸಹಾಯಕ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳ ವೇತನವನ್ನು ಅಂತಹ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡು ಅಲ್ಲಿಂದಲೇ ಕಿರಿಯ ಸಹಾಯಕ ಹುದ್ದೆಯ ವೇತನಶ್ರೇಣಿ ಪಡೆದ ಸಿಬ್ಬಂದಿಗಳ ವೇನತಕ್ಕೆ ಮೇಲ್ದರ್ಜೀಕರಣ ಸೌಲಭ್ಯ ಪಡೆದಿರುವ ಸಿಬ್ಬಂದಿಗಳ ವೇತನ ಮರುನಿಗದೀಕರಣ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ 108646/2017 (S-RES) ರಲ್ಲಿ ದಿನಾಂಕ: 13.02.2023 ರಂದು ನೀಡಿರುವ ಆದೇಶದ ಅನುಸಾರ ಕ್ರಮ ಜರುಗಿಸುವ ವಿಷಯದ ಬಗ್ಗೆ ಪ್ರಸ್ತಾವನೆ. | 01 | 05 |
| 3) | ಶ್ರೀ. ಎಸ್.ಎಸ್.ರಾವಳ, ಅಧೀಕ್ಷಕರು ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 103023/2021 ರ ಆದೇಶ ಜಾರಿ ಕುರಿತು ರಚಿಸಲಾದ ಸಮಿತಿ ವರದಿಯನ್ವಯ ಕ್ರಮಜರುಗಿಸುವ ಕುರಿತು ಪ್ರಸ್ತಾವನೆಯನ್ನು ಪರಿಶೀಲನೆಗಾಗಿ. | 06 | 09 |
| 4) | ಶ್ರೀ. ವಿರೇಶ ಬಿ. ಅಂಚಟಗೇರಿ, ಸದಸ್ಯರು, ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ, ಧಾರವಾಡ ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ಸೌರ ವಿದ್ಯುತ್ ಘಟಕ ಅಳವಡಿಸುವ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಪ್ರಸ್ತಾಪಿಸಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನ ಮತ್ತು ಕಾನೂನು ಅಭಿಪ್ರಾಯದಂತೆ ಶ್ರೀಮತಿ. ಸಿ.ಎಸ್. ಕಣಗಲಿ, ನಿವೃತ್ತ ಕುಲಸಚಿವರು, ಕವಿವಿ ಧಾರವಾಡ ಇವರ ವಿರುದ್ಧ ತನಿಖೆ/ವಿಚಾರಣೆ ಕೈಗೊಳ್ಳಲು ಪೂರ್ವಾನುಮತಿ ನೀಡುವ ಕುರಿತು ಪ್ರಸ್ತಾವನೆಯ ಪರಿಶೀಲನೆಗಾಗಿ. | 10 | 12 |
| | **ಸಿಆಸು (ಶಿಕ್ಷಕ) ವಿಭಾಗ** | | |
| 5) | ಡಾ. (ಶ್ರೀಮತಿ) ವಿ.ಆರ್. ಬೋಳಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರಿಗೆ ಸೇವಾವಧಿಯಲ್ಲಿ ವಿಸ್ತರಿಸಲಾದ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೌಲಭ್ಯಗಳ ಹಾಗೂ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಮತ್ತು ಹಣಕಾಸು ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸುವ ಕುರಿತು. | 13 | 15 |
| 6) | ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ ಪ್ರಾಚಾರ್ಯರಿಗೆ ಸಹಕರಿಸಲು ತಲಾ ಒಬ್ಬ ಅಕ್ಯಾಡೆಮಿಕ್ ಡೀನ್ Academic Dean ರ ನೇಮಕ ಮಾಡುವ ಕುರಿತು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 10.08.2023 ರಂದು ಜರುಗಿದ ಎಲ್ಲ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಸಭೆಯಲ್ಲಿ ನಿರ್ಣಯಿಸಿದಂತೆ ಕ್ರಮ ಜರುಗಿಸುವ ಬಗ್ಗೆ ಸದರ ವಿಷಯವನ್ನು ಪರಿಶೀಲಿಸುವ ಕುರಿತು. | 16 | 19 |

| | | | |
|---|---|---|---|
| | **ಸಿಡಿಸಿ ವಿಭಾಗ** | | |
| 7) | ಸಿಂಡಿಕೇಟ ಹಾಗೂ ವಿದ್ಯಾವಿಷಯಕ್ ಪರಿಷತ್ ಸಭೆಗಳಿಗೆ ನಾಮನಿರ್ದೇಶನಗೊಳಿಸಲು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತಾ ಯಾದಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಸಂದರ್ಭದಲ್ಲಿ ಅರ್ಹತಾ ಮಾನದಂಡಗಳನ್ನು ಅಳವಡಿಸಲು ಡಾ. ರಾಜೇಂದ್ರ ನಾಯಕ ಇವರ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು. | 20 | 20 |
| | **ಸಿಂಡಿಕೇಟ ವಿಭಾಗ** | | |
| 8) | ಡಾ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರನ್ನು ನೇಮಕ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. | 21 | 21 |

ದೂರವಾಣಿ : (0836)2215383 Phone(0836) 2215383

ಕರ್ನಾಟಕ ವಿಶ್ವವಿದ್ಯಾಲಯ
KARNATAK UNIVERSITY
NAAC Accredited with "A" Grade 2014
"UNIVERSITY WITH POTENTIAL FOR EXCELLENCE"
**SYNDICATE SECTION**

ಪಾವಟೆ ನಗರ, ಧಾರವಾಡ-580 003 E-mail ID syndicate@kud.ac.in Pavate Nagar, Dharwad-580 003

Azadi Ka Amrit Mahotsav

ಅ.ಸಂ./ಕವಿವಿ-ಸಿಂಡಿಕೇಟ್/2023-24/ 1375 ದಿನಾಂಕ: 29 SEP 2023

ದಿನಾಂಕ: 06-10-2023 ರಂದು ಮುಂಜಾನೆ 11:30 ಗಂಟೆಗೆ ಕರ್ನಾಟಕ ವಿಶ್ವವಿದ್ಯಾಲಯದ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗುವ ಸಿಂಡಿಕೇಟ್ ಸಭೆಯ ಪೂರ್ವಭಾವಿ ವಿಷಯಪಟ್ಟಿ.

ದಿನಾಂಕ: 28.07.2023ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ.

ದಿನಾಂಕ: 02.09.2023ರ ಸಾಧಾರಣ ಸಿಂಡಿಕೇಟ ಸಭೆಯ ನಿರ್ಣಯಗಳ ನಡಾವಳಿಗಳನ್ನು ದೃಢೀಕರಿಸುವ ಕುರಿತು. (ಮಾನ್ಯ ಸದಸ್ಯರಿಗೆ ಈಗಾಗಲೇ ಸಲ್ಲಿಸಲಾಗಿದೆ)

# ಸಿಂಡಿಕೇಟ್ ಸಭೆಯ ಕಲಂ

02) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿದ್ದ ಗ್ರೂಪ್ 'ಡಿ' ಎಂದು ನೇಮಕಾತಿ ಹೊಂದಿ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಪಡೆದ ಸಿಬ್ಬಂದಿಗಳಿಗೆ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡ ದಿನಾಂಕದಿಂದಲೇ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯನ್ನು ವಿಸ್ತರಿಸದೇ ಇರುವ ಪರಿಣಾಮವಾಗಿ ತದನಂತರ ನೇರವಾಗಿ ಕಿರಿಯ ಸಹಾಯಕ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳ ವೇತನವನ್ನು ಅಂತಹ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡು ಅಲ್ಲಿಂದಲೇ ಕಿರಿಯ ಸಹಾಯಕ ಹುದ್ದೆಯ ವೇತನಶ್ರೇಣಿ ಪಡೆದ ಸಿಬ್ಬಂದಿಗಳ ವೇತನಕ್ಕೆ ಮೇಲ್ದರ್ಜೀಕರಣ ಸೌಲಭ್ಯ ಪಡೆದಿರುವ ಸಿಬ್ಬಂದಿಗಳ ವೇತನ ಮರುನಿಗದೀಕರಣ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ. 108646/2017 (S-RES) ರಲ್ಲಿ ದಿನಾಂಕ : 13.02.2023 ರಂದು ನೀಡಿರುವ ಆದೇಶದ ಅನುಸಾರ ಕ್ರಮ ಜರುಗಿಸುವ ವಿಷಯದ ಬಗ್ಗೆ ಪ್ರಸ್ತಾವನೆ.

**ಟಿಪ್ಪಣಿ :**

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡ ಕೆಲ ಸಿಬ್ಬಂದಿಗಳು ಸೇವೆಗೆ ಸೇರುವ ಮುಂಚೆಯೆ ಅಥವಾ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸಾದ ಪ್ರಯುಕ್ತ ಇಮ್ರಾಪೂರ ಸಮಿತಿಯ ಶಿಫಾರಸ್ಸಿನ ಪ್ರಕಾರ ಅನ್ವಯಿಕ ದಿನಾಂಕದಿಂದ ಅಂದರೆ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸಾಗಿ ಗ್ರೂಪ್ 'ಡಿ' ಸೇವೆಗೆ ಸೇರಿದ ದಿನಾಂಕದಿಂದ ಅಥವಾ ಗ್ರೂಪ್ 'ಡಿ' ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ಪಾಸಾಗಿದ್ದರೆ, ಸದರಿ ಪರೀಕ್ಷೆಯನ್ನು ಪಾಸಾದ ದಿನಾಂಕದಿಂದ ಅನ್ವಯವಾಗುವಂತೆ ಕಿರಿಯ ಸಹಾಯಕ ಹುದ್ದೆಯ ವೇತನ ಮತ್ತು ವೇತನ ಶ್ರೇಣಿಯನ್ನು ಮಂಜೂರು ಮಾಡಲಾಗಿದೆ. ನಂತರ ಈ ಸಿಬ್ಬಂದಿಗಳು ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿಯನ್ನು ಹೊಂದಿರುತ್ತಾರೆ ಮತ್ತು ಕಿರಿಯ ಸಹಾಯಕ ಹುದ್ದೆಯಲ್ಲಿ ಅವರ ಜೇಷ್ಠತೆಯನ್ನು ಪದೋನ್ನತಿ ದಿನಾಂಕದಿಂದಲೇ ಪರಿಗಣಿಸಲಾಗಿರುತ್ತದೆ.

ಈ ರೀತಿಯಾಗಿ ಮೂಲತಃ ಗ್ರೂಪ್ 'ಡಿ' ಹುದ್ದೆಗೆ ನೇಮಕಾತಿ ಹೊಂದಿ ಮತ್ತು ಅಲ್ಲಿಂದಲೇ ಕಿರಿಯ ಸಹಾಯಕ ಹುದ್ದೆಗೆ ವೇತನಶ್ರೇಣಿ ಪಡೆದುಕೊಂಡ ನೌಕರರು, ಅವರು ನಂತರ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಹೊಂದಿರುವ ದಿನಾಂಕದ ಮಧ್ಯದ ಅವಧಿಯಲ್ಲಿ ನೇರವಾಗಿ ಕಿರಿಯ ಸಹಾಯಕ ಹುದ್ದೆಗೆ ನೇಮಕಗೊಂಡಂತಹ ಸಿಬ್ಬಂದಿಗಳು ಅಂತಹ ಗ್ರೂಪ್ 'ಡಿ' ನೌಕರರು ಪದೋನ್ನತಿ ಮಾಡಿದ ದಿನಾಂಕದಿಂದ ಅವರು ಪಡೆಯುತ್ತಿದ್ದ ವೇತನಕ್ಕೆ ಸಮಗೊಳಿಸಲು (Steping up) ಬೇಡಿಕೆ ಇಟ್ಟಿದ್ದರ ಪರಿಣಾಮ ಸುಮಾರು 35 ಸಿಬ್ಬಂದಿಗಳಿಗೆ ವೇತನ ಮೇಲ್ದರ್ಜೀಕರಣ ಸೌಲಭ್ಯವನ್ನು ಮಂಜೂರು ಮಾಡಲಾಗಿದೆ.

ಈ ವಿಷಯದ ಕುರಿತು ಸಂಪೂರ್ಣವಾಗಿ ನಿವೇದಿಸುವುದೇನೆಂದರೆ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರುಪ್-ಡಿ' ಹುದ್ದೆಗೆ ನೇಮಕಗೊಂಡ ಕೆಲವು ನೌಕರರು ಅವರು ಸೇವೆಗೆ ಸೇರುವ ಮುಂಚೆಯೇ ಅಥವಾ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪಾಸಾದ ಪ್ರಯುಕ್ತ ಅವರಿಗೆ ತತ್ಸಂಭಂಧಿತ ದಿನಾಂಕದಿಂದ ಅನ್ವಯಾಗುವಂತೆ ಸಿಂಡಿಕೇಟ್ ಸಭೆಯ ನಿರ್ಣಯ ನಂ.27, ದಿನಾಂಕ :26-12-1998 ರ ಪ್ರಕಾರ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿ ಹಾಗೂ ಸೇವಾ ಸೌಲಭ್ಯಗಳನ್ನು ಸರ್ಕಾರದ ಒಪ್ಪಿಗೆ ನಿರೀಕ್ಷೆಯಲ್ಲಿರಿಸಿ ಮುಚ್ಚಳಿಕೆ ಪತ್ರ ಪಡೆದುಕೊಂಡು ಮಂಜೂರು ಮಾಡಲಾಗಿತ್ತು. ಈ ಸಂಬಂಧವಾಗಿ ಸರ್ಕಾರಿ ಲೆಕ್ಕ ಪರಿಶೋಧಕರು/ಸರ್ಕಾರದಿಂದ ಆಕ್ಷೇಪಣೆಯಿದ್ದುದರಿಂದ ಹಾಗೂ ಸರ್ಕಾರವು ತನ್ನ ಆದೇಶ ದಿ: 30-3-2000 ರಲ್ಲಿ ವಿಶ್ವವಿದ್ಯಾಲಯದ ಗ್ರುಪ್-ಡಿ'ದರ್ಜೆ ನೌಕರರಿಗೆ ನೀಡಲಾಗಿರುವ ಈ ಸೌಲಭ್ಯವನ್ನು ನಿಯಮಬಾಹಿರವೆಂದು ತಿಳಿಸಿ ಅವರಿಗೆ ಮಂಜೂರು ಮಾಡಲಾಗಿರುವ ಈ ಸೌಲಭ್ಯವನ್ನು ಹಿಂಪಡೆಯಲು ಆದೇಶ ಜಾರಿ ಮಾಡಿತ್ತು. ಹಾಗೂ ಅದರಂತೆ ಸಿಂಡಿಕೇಟ ಸಭೆಯು ತನ್ನ ಠರಾವು ನಂ.111 ದಿ: 22-04-2000 ರಲ್ಲಿ ಕೆಳಗಿನಂತೆ ನಿರ್ಣಯಿಸಿತ್ತು.

'The Syndicte considered the Govt. Letter No. ED 61 UKV 99 dated 30.03.2000 and noted the contents with great concern and resolved as under :

i) To withdrow the order issued pursuant to the Syndicate Res. Nos. 26 and 27 of 26.12.1998.
ii) To refix the salary of 'D Group Employee's in the scale existed before the above Syndicte decision was implemented.
iii) To recover the monetory benefits availed by those 'D Group Employees" as Squal to the decision of the Syndicte of 26.12.1998 under its Res. Nos. 26 and 27 of 26.12.1998 in 30 equal monthly instalment from the salary of the inservice emplyoees or from the DA on pension of the retired employees.
iv) This decision does not apply to the Petitioner who have approached the Court and brought the stay.'

ಸರ್ಕಾರಿ ಆದೇಶ ನಂ.ED/61/UKV/99, ದಿನಾಂಕ: 30-3-2000 ಅನ್ನು ಅನುಷ್ಠಾನಗೊಳಿಸುವ ವಿಷಯ ಪರಿಶೀಲನೆಯಲ್ಲಿರುವಾಗಲೇ ಕೆಲ ಭಾದಿತ ನೌಕರರು ಮಾನ್ಯ ಉಚ್ಚನ್ಯಾಯಾಲಯದ ಮೊರೆ ಹೋದದ್ದರಿಂದ ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 30-3-2000 ರ ಸರ್ಕಾರದ ಆದೇಶವನ್ನು ರದ್ದುಗೊಳಿಸಿ ಭಾದಿತ ನೌಕರರಿಂದ ಅಹವಾಲು ಸ್ವೀಕರಿಸಿ ಮಾಡಿದ ಕ್ರಮ ಜರುಗಿಸಲು ಸರ್ಕಾರಕ್ಕೆ ಆದೇಶಿಸಿತ್ತು.

02



ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) ಬೆಂಗಳೂರು ಅವರು ದಿ: 18-3-2006 ರಂದು ವಿಶ್ವವಿದ್ಯಾಲಯಕ್ಕೆ ಸ್ವತಃ ಭೇಟಿ ಕೊಟ್ಟು ಎಲ್ಲ ರಿಟ್ ಅರ್ಜಿದಾರರಿಂದ ಅಹವಾಲುಗಳನ್ನು ಸ್ವೀಕರಿಸಿ ಸೂಕ್ತ ಪರಿಶೀಲನೆ ಮಾಡಿ ಸರ್ಕಾರವು ತನ್ನ ಆದೇಶ ಸಂಖ್ಯೆ. ಇಡಿ/8/ಯುಕೆವಿ/2008 (ಭಾಗ-1) ಬೆಂಗಳೂರು ದಿ: 25-7-2007 ರಲ್ಲಿ ಕೆಳಗಿನಂತೆ ಆದೇಶ ಮಾಡಿತು.

"ನಿಯಮಾನುಸಾರ ಲಭ್ಯವಿದ್ದ ವೇತನ ಶ್ರೇಣಿಗಿಂತಲೂ ಹೆಚ್ಚಿನ ವೇತನ ಶ್ರೇಣಿಗಳನ್ನು ಕೇವಲ ವಿಶ್ವವಿದ್ಯಾಲಯದ ಸಿಂಡಿಕೇಟ ನಿರ್ಣಯದ ಆಧಾರದ ಮೇಲೆ ನೀಡಿರುವುದನ್ನು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಸರಕಾರವು ದಿನಾಂಕ: 30-3-2000 ರಂದು ಹೊರಡಿಸಿದ ಆದೇಶವು ನ್ಯಾಯಸಮ್ಮತವಾಗಿದ್ದು ಈ ಆದೇಶಾನುಸಾರ ತುರ್ತು ಕ್ರಮ ಜರುಗಿಸುವಂತೆಯೂ, ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸುವಂತೆಯೂ ಆದೇಶಿಸಿತು"."

ಮೇಲಿನಂತೆ ಸರ್ಕಾರದ ಆದೇಶನ್ವಯ ಕ್ರಮ ಜರುಗಿಸಲು ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ದಿ: 7-9-2007 ರ0ದು ಜರುಗಿದ ಸಿಂಡಿಕೇಟ ಸಭೆಯು ತನ್ನ ಠರಾವು ನಂ. 70/2 ರಲ್ಲಿ ಸರ್ಕಾರಿ ಆದೇಶ ದಿ: 30-3-2000 ಅನ್ನು ತಕ್ಷಣ ಜಾರಿಗೆ ತರಲು ನಿರ್ಣಯಿಸಿತು. ಇದನ್ನು ಪ್ರಶ್ನಿಸಿ ಕೆಲ ನೌಕರರು ಪುನಃ ಮಾನ್ಯ ಉಚ್ಚನ್ಯಾಯಾಲಯದ ಮೊರೆ ಹೋದರು. ಸದರ ಪ್ರಕರಣವನ್ನು ಪರಿಶೀಲಿಸಿದ ಮಾನ್ಯ ಉಚ್ಚನ್ಯಾಯಾಲಯವು ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಿ ಭಾದಿತ ನೌಕರರಿಗೆ ಒಂದು ಅವಕಾಶವನ್ನು ನೀಡಿ ನ್ಯಾಯಸಮ್ಮತವಾದ ನಿರ್ಣಯವನ್ನು ತೆಗೆದುಕೊಳ್ಳಲು ಆದೇಶಿಸಿತು. ಅದರಂತೆ, ಬಾಧಿತ ನೌಕರರಿಗೆ ನೋಟೀಸ್ ಜಾರಿ ಮಾಡಿ ಅವರ ಅಭಿಪ್ರಾಯವನ್ನು ನೀಡಲು ತಿಳಿಸಲಾಗಿತ್ತು. ಅದರಂತೆ ಅನೇಕ ಭಾದಿತ ನೌಕರರು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದರು. ಅದರಂತೆ, ಭಾದಿತ ನೌಕರರಿಂದ ಪಡೆದ ಲಿಖಿತ ಹೇಳಿಕೆಯ ಪರಿಶೀಲನೆಗೋಸ್ಕರ ಪ್ರಸ್ತಾವನೆಯನ್ನು ಕೂಲಂಕುಷ ಪರಿಶೀಲನೆಗಾಗಿ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಗಿತ್ತು. ಸಿಂಡಿಕೇಟ ಸಭೆ ತನ್ನ ಠರಾವು ನಂ.6 ದಿನಾಂಕ : 25-3-2009 ಮತ್ತು ಸಿಂಡಿಕೇಟ್ ನಿರ್ಣಯ ನಂ.38 ದಿನಾಂಕ : 27-5-2010 ರ ಪ್ರಕಾರ ಹೆಚ್ಚಿಗೆ ನೀಡಿದ ವೇತನ ಹಾಗೂ ವೇತನ ಶ್ರೇಣಿಯನ್ನು ಹಿಂಪಡೆದು ವೇತನ ಮರುನಿಗದಿಪಡಿಸಲು ಹಾಗೂ ಈ ನಿಟ್ಟಿನಲ್ಲಿ ಸರ್ಕಾರದಿಂದ ಖಚಿತ ನಿರ್ದೇಶನ ಇರುವದರಿಂದ ಮತ್ತೆ ಸರ್ಕಾರಕ್ಕೆ ಮರು ಪರಿಶೀಲನೆಗಾಗಿ ಪತ್ರ ಬರೆಯುವ ಅಗತ್ಯವಿಲ್ಲವೆಂದು ನಿರ್ಣಯಿಸಿತು.

ಆದರೆ ಈ ಮಧ್ಯೆ ಗ್ರುಪ್ 'ಡಿ' ಹುದ್ದೆಗೆ ನೇಮಕಗೊಂಡ ಕೆಲವು ನೌಕರರು ಅವರು ಸೇವೆಗೆ ಸೇರುವ ಮುಂಚೆಯೇ ಅಥವಾ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪಾಸಾದ ಪ್ರಯುಕ್ತ ಅವರಿಗೆ ತತ್ಸಂಭಂಧಿತ ದಿನಾಂಕದಿಂದ ಅನ್ವಯಾಗುವಂತೆ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿ ಹಾಗೂ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಿರುವುದರಿಂದ ನೇರವಾಗಿ ಕಿರಿಯ ಸಹಾಯಕ ಹುದ್ದೆಗೆ ನೇಮಕಗೊಂಡ ಕೆಲ ನೌಕರರು ಮನವಿಗಳನ್ನು ಸಲ್ಲಿಸಿ ತಾವು ಕಿರಿಯ ಸಹಾಯಕ ಹುದ್ದೆಯಲ್ಲಿ ಗ್ರುಪ್ 'ಡಿ' ದರ್ಜೆ ನೌಕರರೆಂದು ನೇಮಕಗೊಂಡು ನಂತರ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಹೊಂದಿದ ನೌಕರರಿಗಿಂತ ಕಿರಿಯ ಸಹಾಯಕ ಹುದ್ದೆಯ ಸೇವೆಯಲ್ಲಿ ಹಿರಿಯರಾದರೂ ಕೂಡ ತಮ್ಮ ವೇತನ ಅವರಿಗಿಂತ ಕಡಿಮೆ ಆಗುತ್ತಿರುವದಾಗಿ ತಮಗೂ ಗ್ರುಪ್ 'ಡಿ' ದರ್ಜೆ ನೌಕರರೆಂದು ನೇಮಕಗೊಂಡು ನಂತರ ಕಿರಿಯ ಸಹಾಯಕ ಹುದ್ದೆಗೆ ಪದೋನ್ನತಿ ಹೊಂದಿದ ನೌಕರರ ವೇತನಕ್ಕೆ ಸಮನಾಂತರಗೊಳಿಸಲು (Step up) ವಿನಂತಿಸಿದರು ಹಾಗೂ ಈ ಕೆಳಗಿನ ಸಿಂಡಿಕೇಟ್ ಸಭೆಯ ನಿರ್ಣಯ ಸಂಖ್ಯೆ.68, ದಿ: 14-7-2007 ರ ಪ್ರಕಾರ 35 ಜನ ನೇರವಾಗಿ ಕಿರಿಯ ಸಹಾಯಕ ಹುದ್ದೆಗೆ ನೇಮಕಗೊಂಡ ನೌಕರರಿಗೆ ಗ್ರುಪ್ 'ಡಿ' ಹುದ್ದೆಯಿಂದ ಪದೋನ್ನತಿ ಮೂಲಕ ಕಿರಿಯ ಸಹಾಯಕ ಹುದ್ದೆಗೆ ಬಂದ ನೌಕರರ ವೇತನಕ್ಕೆ ಸಮನಾಂತರಗೊಳಿಸಲಾಗಿದೆ.

> "Resolved to accept the proposal for Stepping up the pay duly obtaining an undertaking to the effect that the decision of the Government, pending in respect of other employees will be binding on them. Further, resolved that this will come into effect from the date of Syndicate approval."

ಸಿಂಡಿಕೇಟ್ ಸಭೆಯ ನಿರ್ಣಯ ನಂ.68, ದಿನಾಂಕ: 14-7-2007 ರಲ್ಲಿ ಗ್ರುಪ್-ಡಿ ಯವರಿಗೆ ಎಸ್‌ಎಸ್‌ಎಲ್‌ಸಿ ಪಾಸಾಗಿದ್ದಕ್ಕಾಗಿ ಕಿರಿಯ ಸಹಾಯಕ ವೇತನ ಶ್ರೇಣಿ ಅನ್ವಯಿಸುವ ದಿನಾಂಕದಿಂದ ನೀಡಿದ ಸೌಲಭ್ಯ ಸರ್ಕಾರದಿಂದ ಒಪ್ಪದಿದ್ದ ಪಕ್ಷದಲ್ಲಿ ಹಿಂಪಡೆಯುವ ಕರಾರಿನಡಿ ಮುಚ್ಚಳಿಕೆ ಪತ್ರ ಪಡೆದು 35 ಜನರಿಗೆ ಸ್ಟೆಪ್ಪಿಂಗ್ ಅಪ್ ಆಫ್ ಪೇ ಸೌಲಭ್ಯ ನೀಡಿದೆ. ಈಗ ಸದರ ಸೌಲಭ್ಯ ಸರ್ಕಾರದಿಂದ ಒಪ್ಪಿಗೆಯಾದ್ದರಿಂದ ತಾವು ಈ ಆದೇಶದ ವ್ಯಾಪ್ತಿಗೆ ಒಳಪಡುವುದರಿಂದ, ಈಗಾಗಲೇ ಸ್ಟೆಪ್ಪಿಂಗ್ ಅಪ್ ಆಫ್ ಪೇ ನೀಡಿದ ಸೌಲಭ್ಯ ಕ್ರಮಬದ್ಧಗೊಳಿಸಬೇಕೆಂದು ಶಿಕ್ಷಕೇತರ ನೌಕರರ ಸಂಘದ ಮೂಲಕ ಆಗ್ರಹಿಸಿದ್ದರು. ಆದ್ದರಿಂದ ಈ ಕುರಿತಂತೆ ಕಚೇರಿ ಪತ್ರ ಸಂಖ್ಯೆ 1821 ದಿ. 8-6-2012 ರ ಮೂಲಕ ಸರಕಾರಕ್ಕೆ ಸ್ಪಷ್ಟೀಕರಣ ಕೋರಲಾಗಿತ್ತು. ಸದರಿ ಪ್ರಕರಣಕ್ಕನುಗುಣವಾಗಿ, ಸರಕಾರವು ತನ್ನ ಪತ್ರ ಸಂಖ್ಯೆ ಇಡಿ 148 ಯುಕೆವಿ 2012 ದಿ. 24-9-2012 ರಲ್ಲಿಈ

03

*"ವಿಶ್ವವಿದ್ಯಾಲಯದಲ್ಲಿ ಗ್ರುಪ್ 'ಡಿ' ಹುದ್ದೆಯಲ್ಲಿ ಸೇವೆಗೆ ಸೇರಿದ ನೌಕರರಿಗೆ ಎಸ್.ಎಸ್.ಎಲ್.ಸಿ. ಪಾಸಾದ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ ಜಾರಿಮಾಡಿದ್ದರಿಂದ ಕಿರಿಯ ಸಹಾಯಕ ಹುದ್ದೆಗೆ ನೇರ ನೇಮಕಾತಿ ಹೊಂದಿದವರಿಗೆ ಸ್ಟೆಪ್ಪಿಂಗ್ ಅಪ್ ಆಫ್ ಪೇ ವಿಷಯಕ್ಕೆ ಸಂಬಂಧಿಸಿದಂತೆ ಈಗಾಗಲೇ ಉಲ್ಲೇಖ (1) ರ ಸರಕಾರದ ಆದೇಶ ಸಂಖ್ಯೆ ಇಡಿ 192 ಯುಕೆವಿ 20 ದಿ. 28-6-2010 ರ ಪ್ರಕಾರ ಸದರಿ ನೌಕರರ ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಹುದ್ದೆಯ ವೇತನ ಸಂರಕ್ಷಣೆ ಮಾಡಿರುವುದನ್ನು ಒಂದು ಬಾರಿ ಅವಕಾಶವೆಂದು* **(as one time measure)** *ನಿರ್ಣಯಿಸಿ ಮಾಡಲಾದ ಆದೇಶವು ಪ್ರಸ್ತಾಪಿಸಲಾದ 35 ಕಿರಿಯ ಸಹಾಯಕರಿಗೂ ಅನ್ವಯಿಸುತ್ತದೆಂದು ಈ ಮೂಲಕ ಸ್ಪಷ್ಟೀಕರಿಸಲು ನಿರ್ದೇಶಿತನಾಗಿದ್ದೇನೆ. ಸದರಿ ಅವಕಾಶವು ಈ ನೌಕರರಿಗೆ ಮಾತ್ರ ಸೀಮಿತಗೊಳಿಸತಕ್ಕದ್ದು ಮತ್ತು ಇನ್ನಿತರೇ ಯಾವುದೇ ಪ್ರಕರಣಕ್ಕೆ ಅನ್ವಯಿಸತಕ್ಕದ್ದಲ್ಲ"* ಎಂದು ಸ್ಪಷ್ಟೀಕರಣ ನೀಡಿದ ಹಿನ್ನಲೆಯಲ್ಲಿ ಪ್ರಸ್ತಾಪಿಸಲಾದ 35 ಸಿಬ್ಬಂದಿಗಳಿಗೆ ಮಾತ್ರ ಸರಕಾರಿ ಆದೇಶ ಸಂಖ್ಯೆ ಇಡಿ 192 ಯುಕೆವಿ 2010 ದಿ. 28-7-2010 ನ್ನು ಜಾರಿಗೊಳಿಸಲಾಗುತ್ತಿದೆ.

ಮುಂದುವರೆದು ಮತ್ತೆ ಸುಮಾರು 60 ಸಿಬ್ಬಂದಿಗಳು ವೇತನ ಮೇಲ್ದರ್ಜೆಗೊಳಿಸುವ ಸೌಲಭ್ಯವನ್ನು ತಮಗೂ ವಿಸ್ತರಿಸಲು ಕವಿವಿ ಶಿಕ್ಷಕೇತರ ನೌಕರರ ಸಂಘದ ಮುಖಾಂತರ ಆಗ್ರಹಿಸಿದ್ದಾರೆ. ಒಟ್ಟಿನಲ್ಲಿ ಸಿಂಡಿಕೇಟ್ ಸಭೆಯ ನಿರ್ಣಯ ನಂ.68, ದಿನಾಂಕ : 14-7-2007 ರ ಪ್ರಕಾರ ಈಗಾಗಲೇ 35 ಜನರಿಗೆ ಸ್ಟೆಪ್ಪಿಂಗ್ ಅಪ್ ಆಫ್ ಪೇ ನೀಡಿದ ಕ್ರಮದಂತೆ, ಸರ್ಕಾರದ ಪತ್ರ ಸಂಖ್ಯೆ ಇಡಿ ಯುಕೆವಿ 2012 ದಿ. 24.9.2012 ನ್ನು ಸ್ಪಷ್ಟೀಕರಿಸಿ ಇನ್ನುಳಿದ ಇಂತಹ 60 ಸಿಬ್ಬಂದಿಗಳು ಈ ಸೌಲಭ್ಯ ಪಡೆಯಲು ಅರ್ಹರೇ ಎಂಬ ಬಗ್ಗೆ ಸ್ಪಷ್ಟ ನಿಯಮಬದ್ಧ ಅಭಿಪ್ರಾಯ ಹಾಗೂ ನಿರ್ದೇಶನವನ್ನು ನೀಡಲು ಕೋರಲಾಗಿತ್ತು,

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಕ್ರಮಾಂಕ:ಇಡಿ 39 ಯುಕೆವಿ2013 ದಿನಾಂಕ:27.03.2013 ರ ಮೂಲಕ ಗ್ರೂಪ್ "ಡಿ" ಸೇವೆಗೆ ಸೇರುವ ಮೊದಲೇ ಅಥವಾ ಗ್ರೂಪ್ "ಡಿ" ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪಾಸಾದ ನೌಕರರಿಗೆ ಅನ್ವಯಿಸುವ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ ನೀಡಿದ್ದು, ಈ ಆಧಾರದ ಮೇಲೆ ಕಿರಿಯ ಸಹಾಯಕ ಹುದ್ದೆಯ ನೇರ ನೇಮಕಾತಿ ಹೊಂದಿದವರಿಗೆ ಸ್ಟೆಪಿಂಗ್ ಅಪ್ ಪೇ ನೀಡುವ ಬಗ್ಗೆ ಪರಿಶೀಲನೆ ಹಾಗೂ ಸ್ಪಷ್ಟೀಕರಣಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುವುದು ಸರಿಯಷ್ಟೆ ಸದರಿ ವಿಷಯದ ಪರಿಶೀಲನೆಗಾಗಿ ಮಾಹಿತಿಯನ್ನು ಸಲ್ಲಿಸುವಂತೆ ನಿರ್ದೇಶನವನ್ನು ನೀಡಿದ್ದು (Flag-'A') ಈ ಕಚೇರಿ ಪತ್ರ ಸಂಖ್ಯೆ 127 ದಿನಾಂಕ:12.04.2013 ರ ಪ್ರಕಾರ ಮಾಹಿತಿಯನ್ನು ಪೂರೈಸಲಾಗಿದೆ. **ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ತನ್ನ ಪತ್ರ ದಿನಾಂಕ 10.02.2015 ರಲ್ಲಿ ಈ ಕೆಳಗಿನಂತೆ ನಿರ್ದೇಶನ ನೀಡಿರುತ್ತಾರೆ.**

"ಉಲ್ಲೇಖಿತ ಉಲ್ಲೇಖ (1) & (2) ರಲ್ಲಿನ ತಮ್ಮ ಪ್ರಸ್ತಾವನೆಗಳನ್ನು ಪರಿಶೀಲಿಸಲಾಯಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರುಪ್-ಡಿ ಹುದ್ದೆಗೆ ನೇಮಕಗೊಂಡ ಸಿಬ್ಬಂದಿಗಳು ಎಸ್.ಎಸ್.ಎಲ್.ಸಿ ಪಾಸಾದ ದಿನಾಂಕದಿಂದ ಅಥವಾ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪಾಸಾದ ಪ್ರಯುಕ್ತ ಅವರಿಗೆ ತತ್ಸಂಬಂಧಿತ ದಿನಾಂಕದಿಂದ ಅನ್ವಯವಾಗುವಂತೆ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗುವಂತೆ ಸ್ಟೆಪಿಂಗ್ ಅಪ್ ಆಫ್ ಪೇ ನೀಡಿರುವ ಕರ್ನಾಟಕ ವಿಶ್ವವಿದ್ಯಾಲಯದ ಕ್ರಮವು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಉಲ್ಲಂಘಿಸಿದಂತಾಗಿರುತ್ತದೆ.

ಆದ್ದರಿಂದ ಹೀಗೆ ಕಿರಿಯ ಸಹಾಯಕರಾಗಿ ನೇಮಕಗೊಂಡವರೆಲ್ಲರಿಗೂ ಕಾರಣಗಳ ಸಮೇತ ನೋಟಿಸ್ ನೀಡಿ, ಅವರಿಂದ ಉತ್ತರ ಪಡೆದು ನಿಯಮಾನುಸಾರ ಸದರಿ ನೌಕರರುಗಳನ್ನು ಗ್ರುಪ್-ಡಿ ನೌಕರರನ್ನಾಗಿ ಪರಿವರ್ತಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ, ಹಾಗೂ ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆಯೂ ಸಹ ತಮ್ಮನ್ನು ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ಈ ಪತ್ರವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD 443 Ser.2/2014, ದಿನಾಂಕ: 23.12.2014 ರಲ್ಲಿ ನೀಡಿರುವ ಸಹಮತಿ ಅನ್ವಯ ಹೊರಡಿಸಲಾಗಿದೆ."

ಸದರ ವಿಷಯವನ್ನು ದಿನಾಂಕ 15.05.2015 ರಂದು ಜರುಗಿದ ಸಿಂಡಿಕೇಟ ಸಭೆಯ ಮುಂದೆ ಮಂಡಿಸಲಾಗಿ, ಅದರಂತೆ ಸಿಂಡಿಕೇಟ ಸಭೆಯ ದಿನಾಂಕ 03.07.2015 ರಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

**ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 10 ದಿನಾಂಕ 15.05.2015/03.07.2015.**

"Resolved to seek specific directions from the Government in the matter, in view of G.O. No. ED 192 UKV 2010 dated 28.07.2010 and Government letter No. ED 140 UKV 2014 dated 10.02.2015 and 26.03.2015."

ಈ ಮೇಲ್ಕಾಣಿಸಿದ ಸಿಂಡಿಕೇಟ ಸಭೆಯ ನಿರ್ಣಯದ ಪ್ರಕಾರ ಈಗಾಗಲೇ ಸರ್ಕಾರವು ತನ್ನ ಆದೇಶ ದಿನಾಂಕ 28.07.2010 ರ ಮೂಲಕ ಗ್ರುಪ್–ಡಿ ದರ್ಜೆಯ ನೌಕರರು ಗ್ರುಪ್–ಡಿ ಹುದ್ದೆಗೆ ನೇಮಕವಾದ ದಿನದಂದು ಹಾಗೂ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪರೀಕ್ಷೆ ಉತ್ತೀರ್ಣರಾಗಿರುವುದಕ್ಕೆ ಅನ್ವಯಿಸುವ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿ ನೀಡಿದ್ದನ್ನು ಹಾಗೂ 35 ಜನ ನೌಕರರಿಗೆ Stepping up of Pay ನೀಡಿದ್ದನ್ನು ದೃಢೀಕರಣಗೊಳಿಸಿದ್ದರಿಂದ ಈ ವಿಷಯವನ್ನು ವಿಶ್ವವಿದ್ಯಾಲಯವು ಕ್ರಮಬದ್ಧಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರವು ತನ್ನ ಪತ್ರದಲ್ಲಿ ಉಲ್ಲೇಖಿಸಿರುವ ಪತ್ರ ದಿನಾಂಕ 10.02.2015 ಕ್ಕೆ ಮರು ಪರಿಶೀಲನೆಗಾಗಿ ಹಾಗೂ ಸೂಕ್ತ ನಿರ್ದೇಶನವನ್ನು ಕೋರಿ ದಿನಾಂಕ 03.09.2015 ಹಾಗೂ ದಿನಾಂಕ 16.02.2016 ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು.

ಆದರೆ, ಈಗ ಸರ್ಕಾರವು ತನ್ನ ಪತ್ರ ದಿನಾಂಕ 06.02.2016 ರ ಮೂಲಕ, ಈ ಮೊದಲನೇಯ ಅವರ ಪತ್ರ ದಿನಾಂಕ 10.02.2015 ರಲ್ಲಿ ತಿಳಿಸಿದಂತೆ ಕ್ರಮ ಕೈಕೊಂಡು ಕರ್ನಾಟಕ ಉಚ್ಚ ನ್ಯಾಯಾಲಯದ ಅವಗಾಹನೆಗೆ ತಂದು ವಿಶ್ವವಿದ್ಯಾಲಯದ ಹಂತದಲ್ಲಿಯೇ ಕ್ರಮ ವಹಿಸುವಂತೆ ತಿಳಿಸಿರುತ್ತಾರೆ.

ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿಗಳ ಪತ್ರ ದಿನಾಂಕ 10.02.2015 ರಲ್ಲಿ ಕಾಣಿಸಿದಂತೆ, ಗ್ರುಪ್–ಡಿ ಹುದ್ದೆಗೆ ನೇಮಕವಾದ ದಿನದಂದು ಹಾಗೂ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪರೀಕ್ಷೆ ಉತ್ತೀರ್ಣರಾಗಿರುವುದಕ್ಕೆ ಅನ್ವಯಿಸುವ ದಿನಾಂಕದಿಂದ ಕಿರಿಯ ಸಹಾಯಕ ವೇತನ ಶ್ರೇಣಿ ನೀಡಿರುವುದು ಹಾಗೂ ಈ ಆಧಾರದ ಮೇಲೆ 35 ಜನ ನೌಕರರಿಗೆ Stepping up of Pay ನೀಡಿರುವದು ನಿಯಮಗಳಿಗೆ ವ್ಯತಿರಿಕ್ತವಾಗಿರುವುದರಿಂದ ವಿಶ್ವವಿದ್ಯಾಲಯವು ಸದರ ಸೌಲಭ್ಯಗಳನ್ನು ಹಿಂಪಡೆಯುವ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಅದು ಅಲ್ಲದೇ, ಈ 35 ಜನ ನೌಕರರಿಗಿಂತಲೂ ಜೇಷ್ಠತೆಯಲ್ಲಿ ಹಿರಿಯರಾದ ಹಾಗೂ ಸೌಲಭ್ಯ ವಂಚಿತ ಸುಮಾರು 81 ಜನ ನೌಕರರಿಗೂ ಸ್ಟೆಪಿಂಗ್ ಅಪ್ ಆಫ್ ಪೇ ಮಂಜೂರು ಮಾಡುವಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅರ್ಜಿದಾರರು ಮೊರೆ ಹೋಗಿದ್ದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ ಶ್ರೀ. ಜೆ.ಸಿ. ಮಳಿಮಠ ಮತ್ತು ಇತರ ನೌಕರರು ರಿಟ್ ಅರ್ಜಿ ಸಂಖ್ಯೆ 100797/2015 ಹಾಗೂ 102874–882/2015 ರಲ್ಲಿ ದಿನಾಂಕ 17.07.2015 ರಂದು ಮಾನ್ಯ ನ್ಯಾಯಾಲಯವು ಈ ಕೆಳಗಿನಂತೆ ಆದೇಶಿಸಿದೆ.

"In view of the aforesaid reasons, this Court is of the considered opinion that it is a fit case to direct respondent no. 1 to consider the representation of the petitioners and pass orders in accordance with law.

In the result, the writ petitions are allowed Respondent No. 1 is directed to consider the representations of the petitioners dated 11.10.2012 and 15.09.2014, only insofar as the petitioners are concerned and pass appropriate order in accordance with law, within a period of four months from the date of receipt of a copy of this order."

ಸದರ ರಿಟ್ ಅರ್ಜಿಯಲ್ಲಿ ಆದೇಶಿಸಿದ ಅಂಶವನ್ನು ಕವಿವಿಯು ದಿನಾಂಕ 28.09.2015 ಹಾಗೂ 02.01.2016 ರಂದು ಸರ್ಕಾರಕ್ಕೆ ಪತ್ರ ಬರೆದು ತಿಳಿಸಿ, ಮುಂದಿನ ಕ್ರಮ ಜರುಗಿಸುವ ಬಗ್ಗೆ ಕೋರಲಾಗಿತ್ತು. ಈಗಾಗಲೇ ಸದರಿ ರಿಟ್ ಅರ್ಜಿದಾರರು 35 ನೌಕರರಿಗೆ ಕೊಟ್ಟಂತಹ ಸೌಲಭ್ಯವನ್ನು ತಮಗೂ ಕೊಡಬೇಕೆಂದು ವಿಶ್ವವಿದ್ಯಾಲಯಕ್ಕೆ ದಿನಾಂಕ 11.10.2012 ಮತ್ತು ದಿನಾಂಕ 15.09.2014 ರಂದು ಮನವಿಯನ್ನು ಸಲ್ಲಿಸಲಾಗಿ, ಈ ಸೌಲಭ್ಯ ವಿಸ್ತರಿಸಲು ಸರ್ಕಾರಕ್ಕೆ ಪತ್ರ ಬರೆದು ಅನುಮೋದನೆಗೆ ಕೋರಲಾಗಿತ್ತು. ತದನಂತರ ರಿಟ್ ಅರ್ಜಿದಾರರಾದ ಶ್ರೀ. ಜೆ.ಸಿ. ಮಳಿಮಠ ಹಾಗೂ ಇತರ ನೌಕರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ನಿಂಧನಾರ್ಜಿಯನ್ನು ಸರ್ಕಾರದ ವಿರುದ್ಧ ದಾಖಲಿಸಿದರು. ಈ ನಿಂಧನಾರ್ಜಿಯನ್ನು ಪರಿಶೀಲಿಸಿ ಸರ್ಕಾರವು ಆದೇಶ ಸಂಖ್ಯೆ ಇಡಿ 142 ಯುಕೆವಿ 2015 ಬೆಂಗಳೂರು, ದಿನಾಂಕ 20.02.2016 ರ ಮೂಲಕ ಈ ಕೆಳಗಿನಂತೆ ಆದೇಶಿಸಿರುತ್ತದೆ. "ಶ್ರೀ.ಜೆ.ಸಿ.ಮಳಿಮಠ ಮತ್ತು ಇತರೇ ಅರ್ಜಿದಾರರು ದಿನಾಂಕ 11.10.2012, 15.09.2014 ಮತ್ತು 01.09.2015 ರಂದು ಸಲ್ಲಿಸಿರುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರೂಪ್ 'ಡಿ' ಹುದ್ದೆಗೆ ನೇಮಕಗೊಂಡು ಸಿಬ್ಬಂದಿಗಳು ಎಸ್.ಎಸ್.ಎಲ್.ಸಿ. ಪಾಸಾದ ದಿನಾಂಕದಿಂದ ಅಥವಾ ಸೇವೆಗೆ ಸೇರಿದ ದಿನಾಂಕದ ನಂತರ ಎಸ್.ಎಸ್.ಎಲ್.ಸಿ. ಪಾಸಾದ ಪ್ರಯುಕ್ತ ಅವರಿಗೆ ತತ್ಸಂಬಂಧಿತ ದಿನಾಂಕದಿಂದ ಅನ್ವಯವಾಗುವಂತೆ ಕಿರಿಯ ಸಹಾಯಕ ಹುದ್ದೆಗೆ ಸ್ಟೆಪಿಂಗ್ ಅಪ್ ಆಫ್ ಪೇ ಮಂಜೂರು ಮಾಡಲು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977, ಕರ್ನಾಟಕ ನಾಗರೀಕ ಸೇವಾ ನಿಯಮಗಳು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹ ಪ್ರಕರಣವಲ್ಲವೆಂದು ಈ ಮೂಲಕ ತಿರಸ್ಕರಿಸಿ, ಆದೇಶಿಸಿದೆ."

ಈ ಮೇಲ್ಕಾಣಿಸಿದ ಸರ್ಕಾರಿ ಆದೇಶ ದಿನಾಂಕ 20.02.2016 ರ ಪ್ರಕಾರ ಮಾನ್ಯ ಉಚ್ಚ ನ್ಯಾಯಾಲಯವು ಸದರ ನ್ಯಾಯಾಲಯ ನಿಂದನಾ ಅರ್ಜಿಯನು ದಿನಾಂಕ 24.02.2016 ರಂದು ವಜಾಗೊಳಿಸಿರುತದೆ.

ಕಾರಣ, ಮೇಲ್ಕಾಣಿಸಿದ ಸರ್ಕಾರದ ಆದೇಶದನ್ವಯ ಸೌಲಭ್ಯವನ್ನು ಏಕೆ ಹಿಂದಕ್ಕೆ ಪಡೆಯಬಾರದು? ಎಂಬುದಕ್ಕೆ ಈ ನೋಟೀಸ್ ಮುಟ್ಟಿದ 7 ದಿನಗಳೊಳಗಾಗಿ ಆಕ್ಷೇಪಣೆ/ವಿವರಣೆ ತಿಳಿಸಲು ಹಾಗೂ ತಪ್ಪಿದಲ್ಲಿ ಅವರಿಂದ ಯಾವುದೇ ಆಕ್ಷೇಪಣೆ/ವಿವರಣೆ ಇಲ್ಲವೆಂದು ಭಾವಿಸಿ ನಿಯಮಾನುಸಾರ ಮುಂದಿನ ಸೂಕ್ತ ಕ್ರಮ ಜರುಗಿಸಲಾಗುವುದೆಂದು ಸುಮಾರು 70+35 ಸೌಲಭ್ಯ ಪಡೆದ ನೌಕರರಿಗೆ ನೋಟಿಸ್‌ನ್ನು ದಿನಾಂಕ 23.02.2016 ರಂದು ಜಾರಿಗೊಳಿಸಲಾಗಿತ್ತು. ಸದರಿ ನೌಕರರು ನೋಟಿಸ್ಸಿಗೆ ಉತ್ತರ ನೀಡಿರುತ್ತಾರೆ. ಅದರಂತೆ, ಈ ಗ್ರೂಪ್ 'ಡಿ' ಹುದ್ದೆಯ ಸಿಬ್ಬಂದಿಗಳು ನೇಮಕವಾದ ದಿನಾಂಕದಿಂದ ಹಾಗೂ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ. ಪರೀಕ್ಷೆ ಉತ್ತೀರ್ಣರಾಗಿರುವುದಕ್ಕೆ ಅನ್ವಯಿಸುವ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿ ನೀಡಿದ 70 ಜನ ಗ್ರೂಪ್ 'ಡಿ' ನೌಕರರು ಹಾಗೂ ತತ್ಸಂಬಂಧಿತ 35 ಜನ ಗ್ರೂಪ್ 'ಸಿ' ನೌಕರರಿಗೆ ಸ್ಟೆಪಿಂಗ್ ಅಪ್ ಆಫ್ ಪೇ ಪಡೆದಿರುವ ನೌಕರರು ನೀಡಿದ ಉತ್ತರಗಳ ಪರಿಶೀಲನೆಗಾಗಿ ದಿನಾಂಕ 23.03.2016 ಹಾಗೂ ದಿನಾಂಕ 12.05.2016 ರಂದು ಸಿಂಡಿಕೇಟ ಸಭೆಗೆ ಮಂಡಿಸಲಾಗಿತ್ತು. ಸದರ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

**ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 14 ದಿನಾಂಕ 23.03.2016 ಹಾಗೂ ಸಿಂಡಿಕೇಟ ತಿದ್ದುಪಡಿ ನಿರ್ಣಯ ಸಂಖ್ಯೆ 14 ದಿನಾಂಕ 12.05.2016.**

*"ಗ್ರುಪ್-ಡಿ'ಸೇವೆಗೆ ಸೇರಿದ ದಿನದಿಂದ ಅಥವಾ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ ಪಾಸಾದ ನೌಕರರಿಗೆ ಅನ್ವಯಿಸುವ ದಿನಾಂಕದಿಂದ ಕಿ.ಸ. ಹುದ್ದೆಯ ವೇತನ ಶ್ರೇಣಿ ನೀಡಿದ್ದನ್ನು ಹಿಂಪಡೆಯುವ ಹಾಗೂ ಈ ನೌಕರರ ವೇತನಕ್ಕೆ ಕಿರಿಯ ಸಹಾಯಕ ಹುದ್ದೆಗೆ ನೇಮಕಾತಿ ಹೊಂದಿದ ನೌಕರರ ವೇತನ ಸಮಗೊಳಿಸಿದ ಸೌಲಭ್ಯವನ್ನು ಹಿಂಪಡೆಯುವ ಕುರಿತು ಸರ್ಕಾರದ ಆದೇಶ ಸಂಖ್ಯೆ ಇಡಿ 142 ಯುಕೆವಿ 2015 ದಿನಾಂಕ 20.02.2016 ಮತ್ತು ಸರ್ಕಾರದ ಪತ್ರ ಸಂಖ್ಯೆ ಇಡಿ 143 ಯುಕೆವಿ 2015 ದಿನಾಂಕ 28.03.2016 ರ ಹಿನ್ನೆಲೆಯಲ್ಲಿ ಸವಿಸ್ತಾರವಾಗಿ ಚರ್ಚಿಸಿ, ನೌಕರರಿಗೆ ನೀಡಿದ ಈ ಸೌಲಭ್ಯವನ್ನು ಹಿಂದಕ್ಕೆ ಪಡೆಯಲು ಸಿಂಡಿಕೇಟ ಒಪ್ಪಿತು".*

ಮೇಲ್ಕಾಣಿಸಿದ ಸಿಂಡಿಕೇಟ್ ನಿರ್ಣಯ ಹಾಗೂ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಗ್ರೂಪ್ 'ಡಿ' ಸೇವೆಗೆ ಸೇರಿದ ದಿನದಿಂದ ಅಥವಾ ಸೇವೆಗೆ ಸೇರಿದ ನಂತರ ಎಸ್.ಎಸ್.ಎಲ್.ಸಿ. ಪಾಸಾದ ನೌಕರರಿಗೆ ಅನ್ವಯಿಸುವ ದಿನಾಂಕದಿಂದ ಕಿರಿಯ ಸಹಾಯಕ ವೇತನ ಶ್ರೇಣಿ ನೀಡಿದ್ದನ್ನು ಹಿಂಪಡೆಯುವ ಹಾಗೂ ಈ ನೌಕರರ ವೇತನಕ್ಕೆ ಹಿರಿಯ ಸಹಾಯಕ ಹುದ್ದೆಗೆ ನೇಮಕ ಹೊಂದಿದ ನೌಕರರ ವೇತನ ಸಮಗೊಳಿಸಿದ ಸೌಲಭ್ಯವನ್ನು ಹಿಂಪಡೆದು ವೇತನ ಮರುನಿಗದಿಪಡಿಸಿದ್ದರ ಕುರಿತಂತೆ, ಈಗಾಗಲೇ ಸ್ಟೇಪಿಂಗ್ ಅಪ್ ಪೇಯನ್ನು ಪಡೆದಂತಹ 35 ಸಿಬ್ಬಂದಿಗಳಿಂದ ಸರ್ಕಾರದ ಆದೇಶದ (Flag-'B') ಪ್ರಕಾರ ಸ್ಟೇಪಿಂಗ್ ಅಪ್ ಪೇ ಸೌಲಭ್ಯವನ್ನು ಹಿಂಪಡೆಯುವ ಕುರಿತಂತೆ ವಿಶ್ವವಿದ್ಯಾಲಯವು ತೆಗೆದುಕೊಂಡ ಕ್ರಮಕ್ಕೆ ಈ 35 ಸಿಬ್ಬಂದಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ದಾಖಲಿಸಿ ತಡೆಯಾಜ್ಞೆಯನ್ನು ತಂದಿದ್ದರು. ಇದಲ್ಲದೆ ವೇತನ ಮೇಲ್ದರ್ಜೀಕರಣ ಸೌಲಭ್ಯದ ಮೂಲ ಸಿಬ್ಬಂದಿಗಳಾದ ಅಂದರೆ ಗ್ರೂಪ್ 'ಡಿ' ಎಂದು ನೇಮಕಗೊಂಡ ಸೇವೆಗೆ ಸೇರಿದ ದಿನಾಂಕದಿಂದ ಅಥವಾ ಎಸ್.ಎಸ್.ಎಲ್.ಸಿ. ಪಾಸಾದ ದಿನಾಂಕದಿಂದ ಕಿರಿಯ ಸಹಾಯಕ ಹುದ್ದೆಯ ವೇತನ ಶ್ರೇಣಿ ಮಂಜೂರು ಮಾಡಲ್ಪಟ್ಟ ಸಿಬ್ಬಂದಿಗಳ ವೇತನವನ್ನು ಮರುನಿಗದಿ ಮಾಡಿದ ಕ್ರಮವನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಿಸಿದ್ದರು.

ಸದರಿ ರಿಟ್ ಅರ್ಜಿಗಳನ್ನು ಒಟ್ಟುಗೂಡಿಸಿ ವಿಚಾರಣೆ ನಡೆಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ: 23.02.2023 ರಂದು ನೀಡಿರುವ ಆದೇಶದ ಅನುಸಾರ ಸರ್ಕಾರದ ಆದೇಶ ದಿನಾಂಕ: 28.07.2010 ರ ಆದೇಶವನ್ನು ಸರ್ಕಾರ ಹಿಂಪಡೆಯುವ ಅಥವಾ ಮಾರ್ಪಾಡು ಮಾಡದ ಹೊರತಾಗಿ ಅರ್ಜಿದಾರ ಸಿಬ್ಬಂದಿಗಳ ವೇತನವನ್ನು ಮರುನಿಗದಿ ಪಡಿಸಲು ವಿಶ್ವವಿದ್ಯಾಲಯಕ್ಕೆ ಯಾವುದೇ ರೀತಿಯ ಅಧಿಕಾರವಿಲ್ಲವೆಂದು ಆದೇಶಿಸಿದೆ. ಈ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ದಿನಾಂಕ: 06.06.2023 ರ ಪತ್ರದ ಮೂಲಕ ಮುಂದಿನ ಕ್ರಮಕೈಗೊಳ್ಳಲು ವಿಶ್ವವಿದ್ಯಾಲಯಕ್ಕೆ ರವಾನಿಸಿರುತ್ತದೆ.

ಸರ್ಕಾರವು ಒಂದು ಬಾರಿ ಅವಕಾಶವೆಂದು ಪರಿಗಣಿಸಿ ದಿನಾಂಕ: 28.07.2010 ರಂದು ಹೊರಡಿಸಿರುವ ಆದೇಶವನ್ನು ಮಾರ್ಪಾಡು ಮಾಡಿರುವುದಿಲ್ಲ ಅಥವಾ ಹಿಂಪಡೆದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆ ತನ್ನ ಠರಾವು ಸಂಖ್ಯೆ: 14 ದಿನಾಂಕ: 12.05.2016 ರಂದು ತೆಗೆದುಕೊಂಡ ನಿರ್ಣಯದ ಮರುಪರಿಶೀಲನೆಗಾಗಿ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 23.02.2023 ರ ಆದೇಶದ ಅನುಸಾರ ಕ್ರಮಕೈಗೊಂಡು ಗಟನೋತ್ತರ ಮಂಜೂರಾತಿಗಾಗಿ ಸರ್ಕಾರದ ಅನುಮೋದನೆ ಕೋರುವ ಬಗ್ಗೆ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಮುಂದೆ. ಪರಿಶೀಲನೆಗಾಗಿ ಮಂಡಿಸಲಾಗಿದೆ.

06

## ಸಿಂಡಿಕೇಟ್ ಸಭೆಯ ಕಲಂ

03 **ವಿಷಯ:** ಶ್ರೀ ಎಸ್ ಎಸ್ ರಾವಳ, ಅಧೀಕ್ಷಕರು ಇವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 103023/2021 ರ ಅದೇಶ ಜಾರಿ ಕುರಿತು ರಚಿಸಲಾದ ಸಮಿತಿ ವರದಿಯನ್ವಯ ಕ್ರಮಜರುಗಿಸುವ ಕುರಿತು ಪ್ರಸ್ತಾವನೆಯನ್ನು ಪರಿಶೀಲನೆಗಾಗಿ.

**ಪ್ರಸ್ತಾವನೆ:**

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬೋಧಕೇತರ ಸಿಬ್ಬಂದಿಗಳ ಸೇವಾ ಜೇಷ್ಠತಾ ಅಂತಿಮ ಯಾದಿಯನ್ನು ದಿನಾಂಕ 13.08.2019 ರಂದು ಪ್ರಕಟಿಸಲಾಗಿರುತ್ತದೆ. ಅದರಂತೆ ಕಾಲ ಕಾಲಕ್ಕೆ ವಿವಿಧ ಕಾರಣಗಳಿಂದಾಗಿ ಖಾಲಿಯಾಗುವ ಹುದ್ದೆಗಳನ್ನು ಈ ಜೇಷ್ಠತಾ ಯಾದಿ ಅನುಸಾರ ಪರಿಶೀಲಿಸಿ ಪದೋನ್ನತಿಗಳನ್ನು ನೀಡುತ್ತಾ ಬರಲಾಗಿದೆ. ಅದರಂತೆ ದಿನಾಂಕ 01.07.2021 ರಂದು ಸಹಾಯಕ ಕುಲಸಚಿವ ಹುದ್ದೆಯು ಖಾಲಿಯಾದ ಪ್ರಯುಕ್ತ ಸದ್ಯ ಜಾರಿಯಲ್ಲಿರುವ ಜೇಷ್ಠತಾ ಯಾದಿಯ ಅನುಸಾರ ಅಧೀಕ್ಷಕ ಹುದ್ದೆಯಲ್ಲಿ ಜೇಷ್ಠರಾಗಿರುವ ಶ್ರೀಮತಿ ಎ ಕೆ ಮಲ್ಲಿಗವಾಡ ಇವರ ಹೆಸರನ್ನು ಸಹಾಯಕ ಕುಲಸಚಿವರ ಹುದ್ದೆಗೆ ಪದೋನ್ನತಿಗಾಗಿ ಪ್ರಸ್ತಾಪಿಸಿ ದಿನಾಂಕ 03.08.2021 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು.

ಶ್ರೀ ಎಸ್. ಎಸ್. ರಾವಳ ಇವರು ಇಲಾಖಾ ಪದೋನ್ನತಿ ಸಭೆಯ ಪ್ರಸ್ತಾವನೆಯ ಮೇಲೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 103023/2021 ದಾಖಲಿಸಿ ತಡೆಯಾಜ್ಞೆಯನ್ನು ತಂದಿದ್ದರ ಪ್ರಯುಕ್ತ ಇದುವರೆಗೆ ಸಹಾಯಕ ಕುಲಸಚಿವರು (ಮಾತೃ ವೃಂದ) ಪದೋನ್ನತಿ ಪ್ರಸ್ತಾವನೆಯನ್ನು ಸ್ಥಗಿತದಲ್ಲಿ ಇಡಲಾಗಿದ್ದು ಇರುತ್ತದೆ. ಹಾಗೂ ಸದರಿ ರಿಟ್ ಅರ್ಜಿಗೆ ಸಂಬಂಧಿಸಿ ವಿಶ್ವವಿದ್ಯಾಲಯವು ಆಕ್ಷೇಪಣಾ ಖಂಡಿಕೆಗಳನ್ನು ಅಗತ್ಯ ದಾಖಲೆಗಳೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಅದರಂತೆ, ಮಾನ್ಯ ನ್ಯಾಯಾಲಯವು ಸದರಿ ರಿಟ್ ಅರ್ಜಿಯ ವಿಚಾರಣೆ ನಡೆಸಿ ದಿನಾಂಕ: 06.07.2023 ನೀಡಿದ ಆದೇಶದ ಅನುಸಾರ ಶ್ರೀ ಎಸ್. ಎಸ್. ರಾವಳ ಇವರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ದಿನಾಂಕ: 29.07.2021 ರ ಆಕ್ಷೇಪಣಾ ಪತ್ರವನ್ನು ಪರಿಶೀಲಿಸಿ ಹೇಳಿಕೆಯನ್ನು ದಾಖಲಿಸಲು ಅವಕಾಶವನ್ನು ನೀಡಿ ನಂತರ ಸಮರ್ಪಕ ಆದೇಶ ಹೊರಡಿಸಿ ಬಳಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ನ್ಯಾಯಾಲಯದ ಆದೇಶ ಸ್ವೀಕೃತವಾದ 3 ತಿಂಗಳ ಕಾಲಮಿತಿಯಲ್ಲಿ ಕ್ರಮ ಜರುಗಿಸಲು ಆದೇಶಿಸಿದ್ದು ಇರುತ್ತದೆ. ಅದರ ಅನುಸಾರ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯದ ಪರವಾಗಿ ಸದರಿ ಪ್ರಕರಣದಲ್ಲಿ ಪ್ರತಿನಿಧಿಸಿದ ವಕೀಲರಾದ ಶ್ರೀ ಕೆ.ಎಲ್. ಪಾಟೀಲ ಇವರು ದಿನಾಂಕ: 13.07.2023 ರಂದು ಮಾನ್ಯ ನ್ಯಾಯಾಲಯದ ಆದೇಶ ದಿನಾಂಕ: 06.07.2023 ರ ಆದೇಶದ ದೃಢೀಕೃತ ಪ್ರತಿಯನ್ನು ಲಗತ್ತಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತ ಮಾನ್ಯ ಉಚ್ಚ ನ್ಯಾಯಾಲಯದ ಅನುಸಾರ ಅರ್ಜಿದಾರರಿಗೆ ತಮ್ಮ ಹೇಳಿಕೆಯನ್ನು ಸಲ್ಲಿಸಲು ಮತ್ತು ತಮ್ಮ ಹೇಳಿಕೆಗೆ ಪೂರಕವಾಗಿ ದಾಖಲೆಗಳೇನಾದರೂ ಇದ್ದಲ್ಲಿ ಅವುಗಳನ್ನು ಸಲ್ಲಿಸಲು ಅವಕಾಶವನ್ನು ನೀಡಿ ಅವರ ಆಕ್ಷೇಪಣೆಗೆ ಸೂಕ್ತ ಆದೇಶವನ್ನು ಜಾರಿ ಮಾಡಿ ಅಂತಿಮ ಜೇಷ್ಠತಾ ಯಾದಿಯನ್ನು 3 ತಿಂಗಳ ಒಳಗಾಗಿ ಪ್ರಕಟಿಸಲು ಕ್ರಮ ಕೈಗೊಳ್ಳಬೇಕೆಂದು ತಮ್ಮ ಕಾನೂನು ಅಭಿಪ್ರಾಯವನ್ನು ತಿಳಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 06.07.2023 ರ ಆದೇಶದಲ್ಲಿ 3 ಭಾಗಗಳು ಒಳಗೊಂಡಿದ್ದು ಮೊದಲನೆ ಭಾಗವಾಗಿ ಶ್ರೀ ಎಸ್. ಎಸ್. ರಾವಳ ಅವರ ದಿನಾಂಕ 29.07.2021 ರ ಮನವಿಯಲ್ಲಿನ 6 ಅಂಶಗಳ ಕುರಿತು ಪರಿಶೀಲಿಸಿ ಅದಕ್ಕೆ ಸಂಬಂಧಪಟ್ಟಂತೆ ಅವರಿಂದ ಹೇಳಿಕೆಯನ್ನು ಪಡೆದುಕೊಳ್ಳುವುದು ಹಾಗೂ ಹೆಚ್ಚುವರಿ ದಾಖಲೆಗಳೇನಾದರು ಇದ್ದಲ್ಲಿ ಅವನ್ನು ಸಲ್ಲಿಸಲು ಇಚ್ಚಿಸಿದಲ್ಲಿ ಅದಕ್ಕೆ ಅವಕಾಶ ಮಾಡಿಕೊಡುವುದು, ಎರಡನೆ ಭಾಗವಾಗಿ ಅವರು ನೀಡುವ ಹೇಳಿಕೆ ಮತ್ತು ಸಲ್ಲಿಸುವ ದಾಖಲೆಗಳನ್ನು ಪರಿಶೀಲಿಸಿ ನಿರ್ಣಯ ಕೈಗೊಳ್ಳುವುದು ಮತ್ತು ಮೂರನೆ ಹಾಗೂ ಅಂತಿಮ ಭಾಗವಾಗಿ ಜೇಷ್ಠತಾ ಯಾದಿಯನ್ನು ಪ್ರಕಟಿಸುವುದು ಎಂದು ಮಾನ್ಯ ನ್ಯಾಯಾಲವು ಆದೇಶದಲ್ಲಿ ತಿಳಿಸಿದ್ದು ಇರುತ್ತದೆ.

ಆದ್ದರಿಂದ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೊದಲ ಭಾಗವಾಗಿ ಶ್ರೀ ಎಸ್. ಎಸ್. ರಾವಳ ಇವರು ದಿನಾಂಕ: 29.07.2021 ರಂದು ಸಲ್ಲಿಸಿರುವ ಆಕ್ಷೇಪಣಾ ಪತ್ರದಲ್ಲಿ ದಿನಾಂಕ: 30.11.1985 ರಂದು ಕಿರಿಯ ಸಹಾಯಕ ಹುದ್ದೆಗೆ ನೇಮಕ ಹೊಂದಿ ಮುಂದೆ 01.03.2008 ರಂದು ಹಿರಿಯ ಸಹಾಯಕ ಹುದ್ದೆಗೆ ಪದೋನ್ನತಿ, ದಿನಾಂಕ: 16.10.2012 ರಲ್ಲಿ ಸಹಾಯಕ ಅಧೀಕ್ಷಕ ಹುದ್ದೆಗೆ ಪದೋನ್ನತಿ ಮತ್ತು 01.01.2016 ರಲ್ಲಿ ಅಧೀಕ್ಷಕ ಹುದ್ದೆಗೆ ಪದೋನ್ನತಿ ಹೊಂದಿದ್ದೇನೆ ಆದರೆ ತನ್ನ ನಂತರ ಸೇವೆಗೆ ಸೇರಿದ ಕಿರಿಯ ನೌಕರರು ದಿನಾಂಕ: 13.08.2019 ರಂದು ಪ್ರಕಟಿಸಲಾದ ಅಂತಿಮ ಜೇಷ್ಠತಾ ಯಾದಿಯಲ್ಲಿ ತನಗಿಂತ ಹಿರಿಯರಾಗಿದ್ದು, ಈ ವಿಷಯಕ್ಕೆ ಸಂಬಂಧಿಸಿ ಈ ಕೆಳಗಿನ 06 ಸಂಗತಿಗಳನ್ನು ಉಲ್ಲೇಖಿಸಿದ್ದಾರೆ.

1) ಸರ್ಕಾರದ ಮಾರ್ಗಸೂಚಿಗಳ ಪಾಲನೆಯಲ್ಲಿ ಸರಿಯಾದ ಕ್ರಮ ವಹಿಸಿರುವುದಿಲ್ಲ.

2) 1983 ರಿಂದ ಯಾರ ಜಾಗೆಯಲ್ಲಿ (Vacancy) ಯಾರ್ಯಾರನ್ನು ತೋರಿಸಲಾಗಿದೆ.

3) ತಮ್ಮ ಕಚೇರಿ ಪತ್ರ ನಂ. 04/2020/639 ದಿನಾಂಕ: 23.07.2021 ರಲ್ಲಿ ರೋಸ್ಟರ್ ಪಾಯಿಂಟ್ (ಸಹಾಯಕ ಕುಲಸಚಿವರ ಹುದ್ದೆಯ) 11 ರಿಂದ ಪ್ರಾರಂಭ ಆಗಿದೆ, ಹಿಂದಿನದ್ದು..?

4) ಕರ್ನಾಟಕ ವಿಶ್ವವಿದ್ಯಾಲಯದ ಜೇಷ್ಠತಾ ಪಟ್ಟಿಯಲ್ಲಿ ಈಗಾಗಲೇ ತೋರಿಸಲಾದ ಬ್ಯಾಕ್‌ಲಾಗ್ ಹುದ್ದೆಗಳನ್ನು 1992 ರ ಪದೋನ್ನತಿಯಲ್ಲಿ ಸಹಾಯಕ ಕುಲಸಚಿವರ ಹುದ್ದೆಗಳನ್ನು ಶ್ರೀ ಎಸ್.ಎಚ್. ಹಾವನೂರ, ಶ್ರೀಮತಿ ಮೀನಾಕ್ಷಿ ಕವಲಿ ಹಾಗೂ ಶ್ರೀ ಎಂ.ಎಂ. ಗಾಯಕವಾಡ ಇವರುಗಳಿಗೆ 1996 ರಲ್ಲಿ ಲೆಕ್ಕ ಹಾಕಲಾಗಿದೆ (ಎರಡನೇ ಸೈಕಲ್ಲಿನಲ್ಲಿ) ಮುಂದೆ ಶ್ರೀ ಟಿ.ಎಫ್. ನಾಗಲಾವಿಯವರಿಗೆ ದಿನಾಂಕ: 28.10.2004 ರಲ್ಲಿ ಸಹಾಯಕ ಕುಲಸಚಿವರ ಹುದ್ದೆಗೆ 1997 ರಲ್ಲಿ ಲೆಕ್ಕಹಾಕಲಾಗಿದೆ (ಎರಡನೇ ಸೈಕಲ್ಲಿನಲ್ಲಿ)
5) 1994 ರಿಂದ 1999 ರ ವರೆಗೆ ಪ್ರಮೋಷನ್ ಇರುವುದಿಲ್ಲ.
6) ದಿನಾಂಕ: 01.07.2002 ರ ಬಡಪ್ಪನವರ ಪ್ರಕರಣವು ನಲ್ & ವಾಯ್ಡ್ ಆಗಿದೆ. ಆದ್ದರಿಂದ 2002 ರ ಕಾಯ್ದೆ ಪ್ರಕಾರ ಜೇಷ್ಠತಾ ಪಟ್ಟಿ ಮುಂದುವರೆದಿದೆ. ಅಂದರೆ 85 ನೇ ಸಂವಿದಾನ ತಿದ್ದುಪಡಿಯೊಂದಿಗೆ ಎಸ್.ಸಿ./ಎಸ್.ಟಿ ಪಂಗಡಗಳಿಗೆ 15+3% ಮೀರತಕ್ಕದ್ದಲ್ಲ ಎಂದು ಇರುತ್ತದೆ.

ಈ 6 ಅಂಶಗಳ ಆಕ್ಷೇಪಣೆ ಕುರಿತು ಪರೀಶೀಲಿಸಿ ಕ್ರಮಜರುಗಿಸಲು ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಶ್ರೀ ಜಿ ಎಮ್ ಕುಂಬಾರ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಕಾನೂನು ಸಲಹೆಗಾರರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು ಸದರಿ ಸಮಿತಿಯು ದಿನಾಂಕ 17.08.2023, 21.08.2023 ಹಾಗೂ 26.08.2023 ರಂದು ಸಭೆ ಸೇರಿ ದಿನಾಂಕ 01.09.2023 ರಂದು ತನ್ನ ಅಂತಿಮ ವರದಿಯನ್ನು ಸಲ್ಲಿಸಿದ್ದು ಇರುತ್ತದೆ. (ಸಮಿತಿ ವರದಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಚರ್ಚೆಯ ಸಂದರ್ಭದಲ್ಲಿ ಮಂಡಿಸಲಾಗುವುದು)

ಶ್ರೀ ಎಸ್. ಎಸ್. ರಾವಳ ಇವರು ದಿನಾಂಕ: 29.07.2021 ರಂದು ಸಲ್ಲಿಸಿರುವ ಆಕ್ಷೇಪಣೆಯ 6 ಅಂಶಗಳ ಕುರಿತು ಸಮಿತಿಯ ನಿರ್ಣಯ ಈ ಕೆಳಗಿನಂತಿರುತ್ತವೆ.

| Point No | Contents of Sri S.S. Rawal in his letter dated: 29.07.2021 | Observations/Reasons by the Committee | Final findings of the Committee |
|---|---|---|---|
| 01 | ಸರ್ಕಾರದ ಮಾರ್ಗಸೂಚಿಗಳ ಪಾಲನೆಯಲ್ಲ ಸರಿಯಾದ ಕ್ರಮ ವಹಿಸಿರುವುದಿಲ್ಲ. | As per the Government order dated: 27.02.2019 (Annexure 1A) and 15.05.2019 (Annexure 1B), to implement the reservation in promotions to SC and ST's in compliance with the Act, 2017. The Karnatak University passed an Office Order dated: 25.05.2019 (Annexure 1C)to implement the said Act of 2017 for the benefit of its employees. Accordingly, on 12.06.2019 a tentative (Annexure 1D) Seniority list has been published on University website and it was placed on University Notice Board and three days time was given to file an objection. But, Sri S.S. Rawal, has not filed any objection within the time limit pertaining to the tentative list. | **On perusal of the above Annexures, the Commit tee found that the University has followed all the relevant guidelines of the Government in preparing the seniority list. Hence the first objection raised by Sri S.S. Rawal has no merit in this regard.** |

(3) 08

| | | | |
|---|---|---|---|
| 02 | 1980 ರಿಂದ ಯಾರ ಜಾಗೆಯಲ್ಲಿ (Vacancy) ಯಾರ್‍ಯಾರನ್ನೊ ತೋರಿಸಲಾಗಿದೆ | As per the objection No. 2 raised by Sri S.S. Rawal relating to vacancy placement of employees, the committee has perused University records regarding the preparation of Vacancy list since 1980. As per the vacancy position of Karnatak University employees, the Committee was constituted under the chairmanship of Registrar on 21.07.2018 to prepare Seniority list. On the basis of report of the said committee the University has prepared the vacancy position list of various cadres in Government Standard formats. The said list is marked as Annexure-6 | The Committee found that the list prepared by University regarding vacancy position is in compliance with all rules and regulations of the Government. Hence, there are no irregularities committed by the University in preparation of Vacancy Position list of various cadres. **Hence, there is no Merit in Objection No. 02** |
| 03 | ತಮ್ಮ ಕಚೇರಿ ಪತ್ರ ನಂ. 04/2020/639 ದಿನಾಂಕ: 23.07.2021 ರಲ್ಲಿ ರೋಸ್ಟರ್ ಪಾಯಿಂಟ್ (ಸಹಾಯಕ ಕುಲಸಚಿವರ ಹುದ್ದೆಯ) 11 ರಿಂದ ಪ್ರಾರಂಭ ಆಗಿದೆ, ಹಿಂದಿನದು. | The Objection No. 03 is that, letter vide No. 04/2020/639 dated: 23.07.2021 relating to Roster Point to the post of Assistant Registrar commences only from Sl.No. 11. But Committee has perused the said letter dated: 23.07.2021 and found that the Roster Point list commences from Sl.No. 01 and ends with Sl.No. 78. The same thing is marked as Annexure-6A. The same was also published in the University's website. | **The Committee found that this objection filed by Sri S.S. Rawal has no merit.** |
| 04 | ಕರ್ನಾಟಕ ವಿಶ್ವವಿದ್ಯಾಲಯದ ಜೇಷ್ಠತಾ ಪಟ್ಟಿಯಲ್ಲಿ ಈಗಾಗಲೇ ತೋರಿಸಲಾದ ಬ್ಯಾಕ್‌ಲಾಗ್ ಹುದ್ದೆಗಳನ್ನು 1992 ರ ಪದೋನ್ನತಿಯಲ್ಲಿ ಸಹಾಯಕ ಕುಲಸಚಿವರ ಹುದ್ದೆಗಳನ್ನು ಶ್ರೀ ಎಸ್.ಎಚ್. ಹಾವನೂರ, ಶ್ರೀಮತಿ ಮೀನಾಕ್ಷಿ ಕವಳಿ ಹಾಗೂ ಶ್ರೀ ಗಾಯಕವಾಡ ಎಮ್.ಎಮ್. ಇವರುಗಳಗೆ-1996 ರಲ್ಲಿ ಲೆಕ್ಕಹಾಕಲಾಗಿದೆ (ಎರಡನೇ ಸೈಕಲ್‌ನಲ್ಲಿ).<br>ಮುಂದೆ, ಶ್ರೀ ಟಿ.ಎಫ್. ನಾಗಲಾವಿ, ಇವರಿಗೆ 28.10.2004 ರಲ್ಲಿ | In preparation of Seniority List of Backlog posts and reservation in promotion of certain employees as stated in objection No. 04, it is noticed that, as per Government Order dated: 13.04.1999 marked as Annexure – 8, the Seniority List is prepared in accordance with guidelines under Annexure– 8. **The objection raised by Sri S.S. Rawal, is not clear and convincing.**<br><br>As per Section 03 of Act, 2017 the | The Committee found that there is no merit in the objection No. 04 raised by Sri S.S. Rawal, which is not clear and convincing. |

| | | | |
|---|---|---|---|
| | ಸಹಾಯಕ ಕುಲಸಚಿವರ ಹುದ್ದೆಗೆ – 1997 ರಲ್ಲಿ ಲೆಕ್ಕಹಾಕಲಾಗಿದೆ (ಎರಡನೇ ಸೈಕಲ್‌ನಲ್ಲಿ). | determination of seniority of Government servants promoted on the basis of reservation. the seniority shall be determined on the basis of length of service in a cadre belonging to Scheduled Caste and Scheduled Tribe. As per Section 04 of the said Act, 2017 protection of consequential seniority already accorded from 27.04.1978 onwards shall be valid and shall be protected and shall not be disturbed. | |
| 05 | 1994 ರಿಂದ –1999 ರ ವರೆಗೆ ಪ್ರಮೋಶನ್ ಇರುವುದಿಲ್ಲ. | The Objection No. 05 is that, there were no promotions from 1994 to 1999. Due to pendency of dispute before the Hon'ble High Court of Karnataka on reservation point, the promotions were delayed. But later, after the disposal of the said dispute by Hon'ble High Court, the University has rectified the same in the year 2003 and 2006 respectively. The said document is marked as Annexure 07. | The University has prepared the seniority list in accordance with the provisions of 85th Amendment to the Indian Constitution in the year 1995. Hence the Committee found that the University has complied with all provisions of the law in preparation of seniority of non-teaching staff. Hence, this objection No.05 is not tenable |
| 06 | 01.07.2002 ರ ಬಡ್ತಪ್ಪನವರ ಪ್ರಕರಣವು ನಲ್ & ವಾಯಿಡ್ ಆಗಿದೆ. ಆದ್ದರಿಂದ, 2002 ರ ಕಾಯಿದೆ ಪ್ರಕಾರ ಜೇಷ್ಠತಾ ಪಟ್ಟಿ ಮುಂದುವರೆದಿದೆ, ಅಂದರೆ 85 ನೇ ಸಂವಿಧಾನ ತಿದ್ದುಪಡಿಯಂತೆ SC/ST ಪಂಗಡಗಳಿಗೆ 15+3 ಮೀರತಕ್ಕದ್ದಲ್ಲ ಎಂದು ಇರುತ್ತದೆ. | The objections raised by Sri S.S. Rawal at Sl. No. 06 have no merits in the eyes of law. There is no over crossing of the representations in SC and ST's in promotions at the ratio 15% for SC and 03% for ST's. *As the Hon'ble Supreme Court of India has accepted the claim of inadequate representation of SC and ST's in "M. Nagaraj vs Union of India"* case | The University has complied with the provisions of 85th Amendment of Indian Constitution in 1995. |

ಆದ್ದರಿಂದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ 103023/2021 ರ ಆದೇಶ ಜಾರಿ ಕುರಿತು ರಚಿಸಲಾದ ಸಮಿತಿ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

Item No. 04

# ಸಿಂಡಿಕೇಟ್ ಸಭೆಗೆ ಕಲಂ

04) **ವಿಷಯ:** ಶ್ರೀ ವಿರೇಶ ಬಿ. ಅಂಚಟಗೇರಿ, ಸದಸ್ಯರು, ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ, ಧಾರವಾಡ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಆವರಣದಲ್ಲಿ ಸೌರ ವಿದ್ಯುತ್ ಘಟಕ ಅಳವಡಿಸುವ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಪ್ರಸ್ತಾಪಿಸಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನ ಮತ್ತು ಕಾನೂನು ಅಭಿಪ್ರಾಯದಂತೆ ಶ್ರೀಮತಿ ಸಿ.ಎಸ್. ಕಣಗಲಿ ನಿವೃತ್ತ ಕುಲಸಚಿವರು, ಕವಿವಿ ಧಾರವಾಡ ಇವರ ವಿರುದ್ಧ ತನಿಖೆ/ವಿಚಾರಣೆ ಕೈಗೊಳ್ಳಲು ಪೂರ್ವಾನುಮತಿ ನೀಡುವ ಕುರಿತು ಪ್ರಸ್ತಾವನೆಯ ಪರಿಶೀಲನೆಗಾಗಿ.

**ಪ್ರಸ್ತಾವನೆ :**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ. ಇಡಿ 36 ಯುಕೆವಿ 2021 ಬೆಂಗಳೂರು ದಿನಾಂಕ: 03.09.2021 ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ಸೌರ ವಿದ್ಯುತ್ ಘಟಕ ಅಳವಡಿಕೆ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಪ್ರಸ್ತಾಪಿಸಿ ಶ್ರೀ ವಿರೇಶ ಅಂಚಟಗೇರಿ, ಸದಸ್ಯರು, ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ, ಮರಾಠಾ ಕಾಲೋನಿ, ಧಾರವಾಡ ಇವರು ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿದ್ದು, ಸದರಿ ದೂರರ್ಜಿಯ ವಿಚಾರಣೆಯನ್ನು ಪೋಲಿಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ ಪೋಲಿಸ್ ಠಾಣೆ, ಧಾರವಾಡ ಇವರು ಕೈಗೊಂಡಿದ್ದು, ಡಾ. ಎಚ್.ಬಿ. ವಾಲೀಕಾರ, ವಿಶ್ರಾಂತ ಕುಲಪತಿಗಳು, ಧಾರವಾಡ, ಡಾ.ಶ್ರೀಮತಿ ಸಿ.ಎಸ್. ಕಣಗಲಿ, ನಿವೃತ್ತ ಕುಲಸಚಿವರು, ಕವಿವಿ, ಧಾರವಾಡ ಹಾಗೂ ಶ್ರೀ ಬಗಲಿ, ನಿವೃತ್ತ ಇಂಜನಿಯರ್, ಕಟ್ಟಡ ವಿಭಾಗ, ಕವಿವಿ, ಧಾರವಾಡ ಇವರುಗಳ ವಿರುದ್ಧ ತನಿಖೆ/ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂಖ್ಯೆ. ಸಿಆಸುಇ/14/ಸೇ.ಲೋ.ಯು/2016, ದಿನಾಂಕ: 16.03.2016 ರ ಪ್ಯಾರಾ ನಂ. 5 ರಿತ್ಯಾ (ಸಾರ್ವಜನಿಕ ನೌಕರರು ತನ್ನ ಅಧಿಕೃತ ಕಾರ್ಯನಿರ್ವಹಣೆಯಲ್ಲಿ ಕೈಗೊಳ್ಳುವ ನಿರ್ಧಾರ ಅಥವಾ ಮಾಡುವ ಶಿಫಾರಸ್ಸುಗಳನ್ನು ಭ್ರಷ್ಟಾಚಾರ ನಿಗ್ರಹ ದಳವು ನೇಮಕಾತಿ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ತನಿಖೆ ಪ್ರಾರಂಭಿಸಲು ಅವಕಾಶವಿರುವುದಿಲ್ಲ.) ಪೂರ್ವಾನುಮೋದನೆಯನ್ನು ಪೋಲಿಸ್ ಮಹಾ ನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ಖನಿಜ ಭವನ, ಬೆಂಗಳೂರು ಇವರಿಗೆ ಗೌಪ್ಯವಾಗಿ ಕಳುಹಿಸಿಕೊಡುವಂತೆ ಪೋಲಿಸ್ ಅಧೀಕ್ಷಕರು, (ಕೇಂದ್ರಸ್ಥಾನ) ಭಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ದಿನಾಂಕ : 23.04.2021 ರಂದು ಸಲ್ಲಿಸಿದ ಪತ್ರದ ಮೂಲಕ ಕೋರಿರುತ್ತಾರೆ. ಆದ್ದರಿಂದ ಶ್ರೀಮತಿ ಸಿ ಎಸ್ ಕಣಗಲಿ, ನಿವೃತ್ತ ಕುಲಸಚಿವರು, ಹಾಗೂ ಶ್ರೀ ಬಗಲಿ ನಿವೃತ್ತ ಸ್ಥಾನಿಕ ಇಂಜಿನಿಯರ್, ಕವಿವಿ ಧಾರವಾಡ ಇವರುಗಳ ವಿರುದ್ದ ಬ್ರಷ್ಟಾಚಾರ ನಿಗ್ರಹ ದಳವು ತನಿಖೆ ನಡೆಸಲು ಪೂರ್ವಾನುಮತಿ ನೀಡುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಗತ್ಯಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗೆಗಿನ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸದರಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರದಲ್ಲಿ ಈ ವಿಶ್ವವಿದ್ಯಾಲಯಕ್ಕೆ ತಿಳಿಸಲಾಗಿತ್ತು.

ಸದರಿ ವಿಷಯವಾಗಿ ಶ್ರೀ ಬಗಲಿ ನಿವೃತ್ತ ಸ್ಥಾನಿಕ ಇಂಜನಿಯರ್ ಇವರನ್ನು ಕವಿವಿ ಇಲ್ಲಿಗೆ ಸಹಾಯಕ ಕಾರ್ಯಪಾಲಕ ಇಂಜನೀಯರ್ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಲೋಕೋಪಯೋಗಿ ಬಂಧರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು ಇವರು ನೇಮಕಾತಿ ಮಾಡಿ ಆದೇಶಿಸಿದ್ದು ಸದರಿಯರ ನೇಮಕಾತಿ ಪ್ರಾಧಿಕಾರವು ಲೋಕೋಪಯೋಗಿ ಬಂಧರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಾಗಿರುವದರಿಂದ ಇವರ ವಿರುದ್ದ ತನಿಖೆ ನಡೆಸಲು ನೇಮಕಾತಿ ಪ್ರಾಧಿಕಾರದಿಂದ ಪೂರ್ವಾನುಮತಿ ಕೋರಿದ್ದು ಇರುವುದರಿಂದ ಶ್ರೀ ಬಗಲಿ ಇವರ ನೇಮಕಾತಿ ಪ್ರಾಧಿಕಾರ ಲೋಕೋಪಯೋಗಿ ಬಂಧರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಾಗಿದೆ ಎಂಬ ವಿಷಯವನ್ನು ಉಲ್ಲೇಖಿಸುತ್ತಾ, ಶ್ರೀಮತಿ ಸಿ.ಎಸ್. ಕಣಗಲಿ ಪ್ರಾಧ್ಯಾಪಕರು ಇಂಗ್ಲೀಷ್ ಅಧ್ಯಯನ ವಿಭಾಗ ಕವಿವಿ ಧಾರವಾಡ ಇವರನ್ನು ಈ ವಿಶ್ವವಿದ್ಯಾಲಯದ ಕುಲಸಚಿವರು (ಆಡಳಿತ) ಹುದ್ದೆಗೆ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯವರು ನೇಮಕಾತಿ ಮಾಡಿ ಆದೇಶಿಸಿದ್ದು ಇರುವುದರಿಂದ ಶ್ರೀಮತಿ ಸಿ.ಎಸ್. ಕಣಗಲಿ ಇವರ ವಿರುದ್ದ ತನಿಖೆ/ವಿಚಾರಣೆ ನಡೆಸಲು ನೇಮಕಾತಿ ಪ್ರಾಧಿಕಾರದ ಪೂರ್ವಾನಮತಿ ಕುರಿತು ಮುಂದಿನ ಕ್ರಮಕೈಗೊಳ್ಳಲು ವಿನಂತಿಸಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಸಂ. ಕೆಯು/ಪಿಎಂಇಬಿ/ಯುಪಿಇ/ಎಚ್‌ಜೆಕೆ/2020–21/167/669 ದಿನಾಂಕ: 25.10.2021 ರ ಮೂಲಕ ಸರ್ಕಾರದ ಅವಗಾಹನೆಗಾಗಿ ಸಲ್ಲಿಸಲಾಗಿತ್ತು.

ಸದರಿ ವಿಷಯವಾಗಿ ಸರ್ಕಾರವು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯ 2000 ಪ್ರಕರಣ 17(1) ರಲ್ಲಿ ಕುಲಸಚಿವ (ಆಡಳಿತ) ಹುದ್ದೆಗೆ ನೇಮಕಾತಿ ಮಾಡಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸಲಾಗಿದ್ದು, ಇದೊಂದು ತಾತ್ಕಾಲಿಕ ಪ್ರಕ್ರಿಯೆ ಆಗಿರುತ್ತದೆ. ಆದರೆ ಶ್ರೀಮತಿ ಸಿ.ಎಸ್. ಕಣಗಲಿ ಇವರ ಪ್ರಕರಣದಲ್ಲಿ ವಾಸ್ತವವಾಗಿ ವಿಶ್ವವಿದ್ಯಾಲಯವು ಸಕ್ಷಮ ಪ್ರಾಧಿಕಾರವಾಗಿರುವುದರಿಂದ ಸರ್ಕಾರದ ಪತ್ರ ದಿನಾಂಕ: 23.09.2021 ರ ಪತ್ರದಲ್ಲಿ ತಿಳಿಸಿರುವಂತೆ ನಿಯಮಾನುಸಾರ ಕ್ರಮವಹಿಸಲು ಸರ್ಕಾರವು ಪತ್ರದಲ್ಲಿ ತಿಳಿಸಿತ್ತು. ಶ್ರೀಮತಿ ಸಿ.ಎಸ್. ಕಣಗಲಿ ಇವರು ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಇಂಗ್ಲೀಷ ಅಧ್ಯಯನ ವಿಭಾಗದ ಪ್ರವಾಚಕರೆಂದು ದಿನಾಂಕ: 07.05.1994 ರಂದು ಹಾಜರಾಗಿದ್ದು ನಂತರ ದಿನಾಂಕ: 30.04.2018 ರಂದು ಸೇವಾ ನಿವೃತ್ತಿಯ 62 ವಯಸ್ಸನ್ನು ತಲುಪಿದ ಕಾರಣ ಕವಿವಿ ಪ್ರಾಧ್ಯಾಪಕರ ಹುದ್ದೆಯ ಸೇವೆಯಿಂದ ನಿವೃತ್ತಿಯಾಗಿರುತ್ತಾರೆ. ಶ್ರೀಮತಿ ಸಿ.ಎಸ್. ಕಣಗಲಿ ಇವರು ಈ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸುತ್ತಿದ್ದ ಅವಧಿಯಲ್ಲಿಯ ಕಾರ್ಯನಿರ್ವಹಣೆಯಲ್ಲಿ ಅವರ ವಿರುದ್ಧ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಿದ ಅವಧಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಾಗಿದ್ದರೆ ಕರ್ನಾಟಕ ವಿಶ್ವವಿದ್ಯಾಲಯವು ವಿಚಾರಣೆ ಕೈಗೊಳ್ಳಲು ಅಧಿಕೃತ ಪ್ರಾಧಿಕಾರವಾಗಿರುತ್ತಿತ್ತು. ಆದರೆ ಸರ್ಕಾರದ ಆದೇಶದಂತೆ ಸದರಿಯವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರೆಂದು ನೇಮಕಾತಿ ಮಾಡಿದ್ದು, ಕುಲಸಚಿವರ ನೇಮಕಾತಿ ಪ್ರಾಧಿಕಾರವು ಸರ್ಕಾರವಾಗಿರುವುದರಿಂದ ಶ್ರೀಮತಿ ಸಿ.ಎಸ್. ಕಣಗಲಿ ಇವರು ಈ ವಿಶ್ವವಿದ್ಯಾಲಯದ ಕುಲಸಚಿವರು(ಆಡಳಿತ) ಆಡಳಿತ ವ್ಯಾಪ್ತಿಯ ಕಾರ್ಯನಿರ್ವಹಣೆಯ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಆವರಣದಲ್ಲಿ ಸೌರ ವಿದ್ಯುತ್ ಘಟಕ ಅಳವಡಿಕೆ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುವುದರಿಂದ ಅದು ಶ್ರೀಮತಿ ಸಿ.ಎಸ್. ಕಣಗಲಿ ಇವರು ಪ್ರಾಧ್ಯಾಪಕರ ಹುದ್ದೆಯ ನಿರ್ವಹಣೆಯ ಪರಿಣಾಮ ಅಥವಾ ಸಲ್ಲಿಸಿದ ಅವಧಿಯಲ್ಲಿ ಜರುಗಿದ ಪ್ರಕರಣ ಅಲ್ಲವಾದ್ದರಿಂದ ಸದರಿ ಪ್ರಕರಣದ ದೂರರ್ಜಿಯ ವಿಚಾರಣೆ ನಡೆಸುವ ಕುರಿತಾಗಿ ಸರ್ಕಾರವು ನೀಡುವ ನಿರ್ದೇಶನದಂತೆ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದೆಂದು ಪುಃನ ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ ಶಿಕ್ಷಕೇತರ/04/2021/1781 ದಿನಾಂಕ : 03.12.2021 ರಂದು ಸರ್ಕಾರದ ನಿರ್ದೇಶನವನ್ನು ಕೇಳಲಾಗಿತ್ತು. ಸದರಿ ಪತ್ರಕ್ಕೆ ಸರ್ಕಾರವು ಶ್ರೀಮತಿ ಸಿ.ಎಸ್. ಕಣಗಲಿ ಇವರನ್ನು ಸರ್ಕಾರವು ಕುಲಸಚಿವರನ್ನಾಗಿ ನೇಮಿಸಿದ್ದರೂ ಸಹ ಇದೊಂದು ತಾತ್ಕಾಲಿಕ ಪ್ರಕ್ರಿಯೆಯಾಗಿರುತ್ತದೆ. ಆದರೆ ಶ್ರೀಮತಿ ಸಿ.ಎಸ್. ಕಣಗಲಿ, ನಿವೃತ್ತ ಪ್ರಾಧ್ಯಾಪಕರು ಇವರ ಮೂಲ ನೇಮಕಾತಿ ಪ್ರಾಧಿಕಾರ ವಿಶ್ವವಿದ್ಯಾಲಯವಾಗಿರುವುದರಿಂದ ಸದರಿಯವರ ವಿರುದ್ಧ ತನಿಖೆ ನಡೆಸುವಂತೆ ಭ್ರಷ್ಟಾಚಾರ ನಿಗ್ರಹ ದಳಕ್ಕೆ ಪೂರ್ವಾನ್ಮತಿ ನೀಡುವಂತೆ ನಿಯಮಾನುಸಾರ ಅಗತ್ಯ ಕ್ರಮಕ್ಕೈಗೊಳ್ಳುವಂತೆ ತಿಳಿಸಿ ದಿನಾಂಕ: 05.03.2022 ರಂದು ಮತ್ತು ದಿನಾಂಕ: 04.05.2022 ರಂದು ಸರ್ಕಾರವು ಬರೆದ ಪತ್ರದಲ್ಲಿ ತಿಳಿಸಿದ ಕಾರಣ, ಸದರಿ ವಿಷಯವಾಗಿ ವಿಶ್ವವಿದ್ಯಾಲಯದ ವಕೀಲರಾದ ಶ್ರೀ ಬಸವರಾಜ ಗೊಡಚಿ, ವಕೀಲರು ಉಚ್ಚ ನ್ಯಾಯಾಲಯ, ಧಾರವಾಡ ಇವರ ಕಾನೂನು ಅಭಿಪ್ರಾಯವನ್ನು ಕೋರಲಾಗಿ ಸದರಿ ವಕೀಲರು ಸಲ್ಲಿಸಿದ ಕಾನೂನು ಅಭಿಪ್ರಾಯದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ನಿಯಮ 17 (1) ರ ಪ್ರಕಾರ ಡಾ.ಶ್ರೀಮತಿ ಸಿ.ಎಸ್. ಕಣಗಲಿ, ಪ್ರಾಧ್ಯಾಪಕರು ಇಂಗ್ಲೀಷ್ ಅಧ್ಯಯನ ವಿಭಾಗ ಕವಿವಿ ಧಾರವಾಡ ಇವರನ್ನು ಈ ವಿಶ್ವವಿದ್ಯಾಲಯದ ಕುಲಸಚಿವರೆಂದು ನೇಮಕ ಮಾಡಿರುವುದರಿಂದ ಸದರಿ ನಿಯಮದ ಅಧಿನಿಯಮದ 8 ರ ಪ್ರಕಾರ ಸದರಿಯವರ ಮೇಲೆ ವಿಚಾರಣೆ ಕೈಗೊಳ್ಳುವ ಅಧಿಕೃತ ಪ್ರಾಧಿಕಾರವು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವುದರಿಂದ ದೂರರ್ಜಿಯ ವಿಚಾರಣೆ ನಡೆಸುವ ಕುರಿತಾಗಿ ಪೂರ್ವಾನುಮತಿ ನೀಡುವ ವಿಷಯದ ಕುರಿತು ಮುಂದಿನ ಹಂತದ ಕ್ರಮಗಳನ್ನು ಜರುಗಿಸಲು ಕೋರಲಾದ ಪತ್ರವನ್ನು ಸರ್ಕಾರಕ್ಕೆ ಬರೆಯಲಾಗಿತ್ತು (ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ಶಿಕ್ಷಕೇತರ/2022/1231, ದಿನಾಂಕ: 18.08.2022)

ಸದರಿ ಪತ್ರಕ್ಕೆ ಉತ್ತರವಾಗಿ ಸರ್ಕಾರವು, ಶ್ರೀ ವಿರೇಶ ಅಂಚಟಗೇರಿ, ಸದಸ್ಯರು, ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ, ಮರಾಠಾ ಕಾಲೋನಿ, ಧಾರವಾಡ ಇವರು ಸಲ್ಲಿಸಿದ್ದ ದೂರರ್ಜಿಯ ಪ್ರಕರಣವು ಎಸಿಬಿ ಪೋಲಿಸ್ ಠಾಣೆ, ಧಾರವಾಡದಲ್ಲಿ ದಾಖಲಾಗಿ ವಿಚಾರಣೆಯಲ್ಲಿರುತ್ತದೆ. ಸದ್ಯ ಸದರಿ ಅರ್ಜಿಯು ಲೋಕಾಯುಕ್ತ ಪೊಲೀಸ್ ಠಾಣೆ, ಇಲ್ಲಿಗೆ ವರ್ಗಾವಣೆಗೊಂಡಿರುತ್ತದೆ. ಆದರೆ ಪ್ರಸ್ತಾಪಿತ ವಿಷಯದ ಕುರಿತು ಸದರಿಯವರ ವಿರುದ್ಧ ವಿಚಾರಣೆ/ತನಿಖೆ ನಡೆಸಲು ಪೂರ್ವಾನುಮತಿ ಕೋರಲಾಗಿರುವ ಬಗ್ಗೆ ಯಾವುದೇ ಮಾಹಿತಿ ಸ್ವೀಕೃತವಾಗಿಲ್ಲವಾದ್ದರಿಂದ ಕೂಡಲೇ ಅನುಮತಿ ನೀಡುವಂತೆ ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಧಾರವಾಡ ಇವರು ಕೋರಿರುತ್ತಾರೆ. ಶ್ರೀಮತಿ ಸಿ.ಎಸ್. ಕಣಗಲಿ, ನಿವೃತ್ತ ಇವರ ವಿರುದ್ಧ ತನಿಖೆ/ವಿಚಾರಣೆ ನಡೆಸಲು ಕೂಡಲೇ ಸಿಂಡಿಕೇಟ್ ಅನುಮತಿ ಪಡೆದು [illegible] ಕೈಗೊಳ್ಳುವಂತೆ ಹಾಗೂ ಕೈಗೊಂಡ ಕ್ರಮದ ಬಗ್ಗೆ

ಅನುಸರಣಾ ವರದಿಯನ್ನು 10 ದಿನಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ದಿನಾಂಕ: 11.07.2022 ರ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರಗಳಲ್ಲಿ ವಿಶ್ವವಿದ್ಯಾಲಯಕ್ಕೆ ನಿರ್ದೇಶನ ನೀಡಲಾಗಿರುತ್ತದೆ. ಮತ್ತು ಸದರಿ ಪತ್ರಗಳ ಹಿನ್ನೆಲೆಯಲ್ಲಿ ಪೂರ್ವಾನುಮತಿ ಪಡೆಯಲು ವಿಶ್ವವಿದ್ಯಾಲಯದೊಂದಿಗೆ ಸಮಾಲೋಚಿಸುವಂತೆಯೂ ಸಹ ಎಸಿಬಿಗೆ ತಿಳಿಸಲಾಗಿರುತ್ತದೆ ಎಂದು ಸರ್ಕಾರದ ಪತ್ರದಲ್ಲಿ ತಿಳಿಸಿ. ಪುನ: ದಿನಾಂಕ: 25.05.2023 ರಂದು ಸರ್ಕಾರವು ಬರೆದ ಪತ್ರದಲ್ಲಿ, ವಿಶ್ವವಿದ್ಯಾಲಯಗಳ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟ ಕರ್ತವ್ಯಗಳ ನಿರ್ವಹಣೆ ಹಾಗೂ ಮೇಲುಸ್ತುವಾರಿ ಕೆಲಸವು ಕುಲಸಚಿವರ ಹುದ್ದೆಯ ಮುಖ್ಯ ಕರ್ತವ್ಯವಾಗಿರುತ್ತದೆ. ಈ ಉದ್ದೇಶಕ್ಕಾಗಿ ಕುಲಸಚಿವ ಹುದ್ದೆಗೆ ಸರ್ಕಾರದಿಂದ ನಿಯೋಜನೆ ಮೇಲೆ ನೇಮಕಾತಿ ವಾಸ್ತವವಾಗಿ ಸದರಿಯವರ ಮೂಲ ಸಕ್ಷಮ ಪ್ರಾಧಿಕಾರವು ವಿಶ್ವವಿದ್ಯಾಲಯವಾಗಿರುತ್ತದೆ. ಕೇವಲ ಕುಲಸಚಿವ ಹುದ್ದೆಗೆ ಸರ್ಕಾರದಿಂದ ನಿಯೋಜನೆಯ ಮೇರೆಗೆ ನೇಮಕಾತಿ ಮಾಡಿದ ಕಾರಣಕ್ಕೆ ಸಕ್ಷಮ ಪ್ರಾಧಿಕಾರಗಳು ಬದಲಾವಣೆ ಯಾಗಿರುವುದಿಲ್ಲ. ಆದುದರಿಂದ ಈ ಪರಿಕಲ್ಪನೆಯನ್ನು ಗಮನದಲ್ಲಿಟ್ಟುಕೊಂಡು ಡಾ.ಶ್ರೀಮತಿ ಸಿ.ಎಸ್. ಕಣಗಲಿ ನಿವೃತ್ತ ಇವರ ಅವಧಿಯಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಸೌರ ವಿದ್ಯುತ್ ಘಟಕ ಅಳವಡಿಕೆ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ತನಿಖೆ ನಡೆಸಲು ಕರ್ನಾಟಕ ಲೋಕಾಯುಕ್ತ, ಧಾರವಾಡ ಇವರಿಗೆ ಪೂರ್ವಾನುಮತಿ ನೀಡುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ಸರ್ಕಾರವು ಸ್ಪಷ್ಟವಾಗಿ ನಿರ್ದೇಶನವನ್ನು ನೀಡಿದ ಕಾರಣದಿಂದ ಸದರಿ ವಿಷಯದ ಕುರಿತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆಯಲಾಗಿ, ಲೋಕಾಯುಕ್ತ ಧಾರವಾಡ ಇವರಿಗೆ ಕಲಂ 17ಎ ಭ್ರಷ್ಟಾಚಾರ ಪ್ರತಿಭಂದಕ ಕಾಯ್ದೆ 1988 ರನ್ವಯ ಪೂರ್ವಾನುಮತಿ ನೀಡುವಂತೆ ವಿಶ್ವವಿದ್ಯಾಲಯವು ಸಕ್ಷಮ ಪ್ರಾಧಿಕಾರವಾಗಿದೆ ಎಂದು ತಿಳಿಸಿ, ಶ್ರೀಮತಿ ಸಿ.ಎಸ್. ಕಣಗಲಿ ಇವರಿಗೆ ಸಂಬಂಧಪಟ್ಟಂತೆ ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆಯುವ ಅವಶ್ಯಕತೆ ಇಲ್ಲವೆಂದು, ಸರ್ಕಾರವು ದಿನಾಂಕ 25.05.2023 ರಂದು ಬರೆದ ಪತ್ರದಲ್ಲಿ ತಿಳಿಸಿದಂತೆ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯವು ಶ್ರೀಮತಿ ಸಿ.ಎಸ್. ಕಣಗಲಿ ಇವರ ವಿರುದ್ಧ ಸಲ್ಲಿಕೆಯಾದ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಧಾರವಾಡ ಇವರಿಗೆ ಪೂರ್ವಾನುಮತಿ ನೀಡುವ ಬಗ್ಗೆ ನಿಯಮಾನಸಾರ ಕೂಡಲೇ ಕ್ರಮಕೈಗೊಳ್ಳುವುದು ಅವಶ್ಯವಾಗಿದೆ ಎಂದು ತಿಳಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 53 ರ ಉಪಪ್ರಕರಣ 7 ರನ್ವಯ ಶಿಕ್ಷಕರ ಸಕ್ಷಮ ನೇಮಕಾತಿ ಪ್ರಾಧಿಕಾರ ಸಿಂಡಿಕೇಟ್ ಆಗಿರುವುದಿರಿಂದ ಈ ವಿಷಯದಲ್ಲಿ ಸಿಂಡಿಕೇಟ್ ಪೂರ್ವಾನುಮತಿ ಪಡೆಯುವುದು ಅವಶ್ಯವಿದೆ ಎಂದು ಕಾನೂನು ಸಲಹೆಗಾರರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು ಇರುತ್ತದೆ.

ಆದ್ದರಿಂದ ಶ್ರೀ ವಿರೇಶ ಬಿ. ಅಂಚಟಗೇರಿ, ಸದಸ್ಯರು, ವಿಶ್ವವಿದ್ಯಾಲಯ ಉಳಿಸಿ ಹೋರಾಟ ಸಮಿತಿ, ಧಾರವಾಡ ಇವರು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಆವರಣದಲ್ಲಿ ಸೌರ ವಿದ್ಯುತ್ ಘಟಕ ಅಳವಡಿಸುವ ಯೋಜನೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಪ್ರಸ್ತಾಪಿಸಿ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರನ್ನು ಸಲ್ಲಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನ ಮತ್ತು ಕಾನೂನು ಅಭಿಪ್ರಾಯದಂತೆ ಶ್ರೀಮತಿ ಸಿ.ಎಸ್. ಕಣಗಲಿ ನಿವೃತ್ತ ಕುಲಸಚಿವರು, ಕವಿವಿ ಧಾರವಾಡ ಇವರ ವಿರುದ್ಧ ತನಿಖೆ/ವಿಚಾರಣೆ ಕೈಗೊಳ್ಳಲು ನಿಯಮಾನುಸಾರ ಪೂರ್ವಾನುಮತಿ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

05 **ವಿಷಯ:** **ಡಾ. (ಶ್ರೀಮತಿ) ವಿ.ಆರ್. ಬೋಳಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ** ಇವರಿಗೆ ಸೇವಾವಧಿಯಲ್ಲಿ ವಿಸ್ತರಿಸಲಾದ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೌಲಭ್ಯಗಳ ಹಾಗೂ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಮತ್ತು ಹಣಕಾಸು ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

**ಡಾ. (ಶ್ರೀಮತಿ) ವಿ.ಆರ್. ಬೋಳಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ** ಇವರು ದಿನಾಂಕ: 30.04.2014 ರಂದು ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿರುತ್ತಾರೆ. ಮಾನ್ಯ ಸರ್ಕಾರಿ ಲೆಕ್ಕ ಪರಿಶೋಧಕರು ಸಲ್ಲಿಸಿದ ಲೆಕ್ಕ ಪರಿಶೋಧನಾ ವರದಿಗಳನ್ನು ಪರಿಶೀಲಿಸಲಾಗಿ, ಸದರಿಯವರಿಗೆ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯ ವೇತನವನ್ನು ನಿಗದಿಪಡಿಸಿ, ಅದರಂತೆ ವೇತನ, ವೇತನ ಭತ್ಯೆಗಳನ್ನು ಪಾವತಿಸಿದ ಕುರಿತು ***2011-12, 2012-13, 2013-14, 2014-15, 2015-16 ಮತ್ತು 2016-17 ನೇ ಸಾಲಿನ ಬೋಧಕ ಸಿಬ್ಬಂದಿಗಳ ವೇತನ ವಿಭಾಗದ ಲೆಕ್ಕ ಪರಿಶೋಧನಾ ವರದಿಯಲ್ಲಿ*** ಮುಂದುವರೆದ ಕಂಡಿಕೆಯಾಗಿದ್ದು, ಸದರಿ ಕಂಡಿಕೆಗಳಲ್ಲಿ ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಪ್ರತಿ ವರ್ಷ ವರದಿವಾರು ಅನುಸರಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯು ತಿರುವಳಿಗೊಂಡಿರುವುದಿಲ್ಲ.

ಡಾ. (ಶ್ರೀಮತಿ.) ವ್ಹಿ. ಆರ್. ಬೋಳಾರ ಇವರು ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ಕ.ವಿ.ವಿ ಧಾರವಾಡ ಇಲ್ಲಿ ದಿನಾಂಕ 11.09.1989 ರ ಕಚೇರಿ ಆದೇಶ ಸಂಖ್ಯೆ ಕೆಯು/ ಡಿಪಿಎಆರ್/ ಎಸ್‌ಆರ್‌ಟಿ/89/5217 ರನ್ವಯ ಉಪನ್ಯಾಸಕ ಹುದ್ದೆಗೆ ನೇಮಕಗೊಂಡು ದಿನಾಂಕ 12.09.1989 ರಂದು ಸೇವೆಗೆ ವರದಿ ಮಾಡಿಕೊಂಡಿರುತ್ತಾರೆ. (ಅನುಬಂಧ 'ಎ')

ಮುಂದುವರೆದು, ಡಾ. (ಶ್ರೀಮತಿ.) ವ್ಹಿ. ಆರ್. ಬೋಳಾರ ಇವರು ತಮ್ಮ ಸೇವಾವಧಿಯಲ್ಲಿ ಅಂದರೆ ದಿನಾಂಕ 17/03/2008 ರಲ್ಲಿ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಷಯದಲ್ಲಿ ಪಿ.ಎಚ್.ಡಿ. ಪದವಿಯನ್ನು ಹೊಂದಿರುತ್ತಾರೆ. (ಅನುಬಂಧ 'ಬಿ)

1986 ರಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಅವರ ಸೇವಾ ಅರ್ಹತೆಗನುಗುಣವಾಗಿ ಉಪನ್ಯಾಸಕರು ಹಿರಿಯ ಶ್ರೇಣಿ ಪದೋನ್ನತಿಯನ್ನು ಈ ಕೆಳಗಿನಂತೆ ಮಂಜೂರು ಮಾಡಿ ಆದೇಶ ಜಾರಿ ಮಾಡಿದ್ದು ಇರುತ್ತದೆ. (ಅನುಬಂಧ 'ಸಿ')

| ಅ. ನಂ. | ಪದನಾಮ | ಪದೋನ್ನತಿ ನೀಡಿದ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ |
|---|---|---|---|
| 01. | ಉಪನ್ಯಾಸಕರು (ಹಿರಿಯ ಶ್ರೇಣಿ) | 18.10.1997 | 3656/03.09.2004 |

ಮುಂದುವರೆದು, ಈ ಕಚೇರಿ ಆದೇಶ ಸಂ. ಕೆಯು/ ಡಿಪಿಎಆರ್/ಟಿ/2009/623/ಬಿ ದಿನಾಂಕ 11.05.2009 ರನ್ವಯ ಸದರಿಯವರ ಉಪನ್ಯಾಸಕರು (ಹಿರಿಯ ವೇತನ ಶ್ರೇಣಿ) ಪದೋನ್ನತಿಯನ್ನು ದಿನಾಂಕ 18.10.1997 ರ ಬದಲಾಗಿ 15.11.1999 ಕ್ಕೆ (1996 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಗಳ ಆದೇಶ ದಿನಾಂಕದಿಂದ) ಆದೇಶ ಜಾರಿಮಾಡಲಾಗಿರುತ್ತದೆ (ಅನುಬಂಧ 'ಡಿ')

ತದನಂತರ 1996 ರ ಯುಜಿಸಿ ವೇತನ ಶ್ರೇಣಿಯ ಸರ್ಕಾರಿ ಆದೇಶ ಸಂಖ್ಯೆ ಇಡಿ 100 ಯುಎನ್‌ಇ 99 ದಿನಾಂಕ 15.11.1999 ರ ಕಂಡಿಕೆ ಸಂಖ್ಯೆ.13 ರ ಉಪ ಕಂಡಿಕೆ 1 ರ ಪ್ರಕಾರ, ಡಾ. (ಶ್ರೀಮತಿ) ವಿ.ಆರ್.ಬೊಳಾರ ಇವರು ಉಪನ್ಯಾಸಕರು ಹಿರಿಯ ಶ್ರೇಣಿ ಎಂದು ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತರುವಾಯ ದಿನಾಂಕ 15.11.2004 ರಿಂದ ಅನ್ವಯವಾಗುವಂತೆ ಉಪನ್ಯಾಸಕ (ಆಯ್ಕೆ ಶ್ರೇಣಿ) ಹುದ್ದೆಯ ಪದೋನ್ನತಿಯನ್ನು ಆದೇಶವನ್ನು ಈ ಕೆಳಗಿನಂತೆ ಜಾರಿಮಾಡಲಾಗಿರುತ್ತದೆ.

| ಅ.ಸಂ. | ಪದನಾಮ | ಪದೋನ್ನತಿ ನೀಡಿದ ದಿನಾಂಕ | ಕಚೇರಿ ಆದೇಶ ಸಂಖ್ಯೆ ಹಾಗೂ ದಿನಾಂಕ |
|---|---|---|---|
| 01. | ಉಪನ್ಯಾಸಕ (ಆಯ್ಕೆ ಶ್ರೇಣಿ) | 15.11.2004 | 623/ಬಿ/11.05.2009 |

ಮುಂದುವರೆದು, ಬೋಧಕ ಸಿಬ್ಬಂದಿಗಳಿಗೆ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿ ಸರ್ಕಾರಿ ಆದೇಶ ಸಂಖ್ಯೆ ಇಡಿ 37 ಯುಎನ್‌ಇ 2009 ದಿನಾಂಕ 24.12.2009 ರ ಮೂಲಕ ಜಾರಿಯಾಗಿದ್ದು,ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿ ಜಾರಿ ಮಾಡುವ ಸಂದರ್ಭದಲ್ಲಿ ಬೋಧಕ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯನ್ನು ಮರು ಪದನಾಮಗೊಳಿಸಿ,ಆಹುದ್ದೆಯಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ. 01.01.2006 ರಿಂದ ಅನ್ವಯವಾಗುವಂತೆ ಸದರ ವೇತನ ಶ್ರೇಣಿಯಲ್ಲಿ ಮೂಲ ವೇತನವನ್ನು ನಿಗದಿಪಡಿಸಲು ಸದರ

ಪು.ತಿ.ನೋ.

14



ಆದೇಶದ Appendix-III ರ ಕಂಡಿಕೆ ಸಂಖ್ಯೆ.01 ರ ಉಪಖಂಡಿಕೆ A ದಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಅದರಂತೆ ಡಾ. (ಶ್ರೀಮತಿ) ವಿ.ಆರ್.ಬೋಳಾರ ಇವರು ಆ ಸಮಯದಲ್ಲಿ ಕಾರ್ಯ ನಿರ್ವಹಿಸುತಿದ್ದು "ಉಪನ್ಯಾಸಕ" ಹುದ್ದೆಯಲ್ಲಿ 03 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರದಲ್ಲಿ ಆ ಹುದ್ದೆಯನ್ನು ಈ ಕೆಳಗಿನಂತೆ ಮರು ಪದನಾಮಗೊಳಿಸಿ,ಸದರಿ ಹುದ್ದೆಯಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಪದೋನ್ನತಿ/ಸ್ಥಾನಿಕರಣ ಸೌಲಭ್ಯವನ್ನು ಮಂಜೂರು ಮಾಡಿರುವುದಿಲ್ಲ ಎಂಬುದನ್ನು ಇಲ್ಲಿ ಸ್ಪಷ್ಟಿಕರಿಸಿ ತಮ್ಮ ಗಮನಕ್ಕೆ ತರಲಾಗಿದೆ. (ಅನುಬಂಧ-'ಇ')

ಮುಂದುವರೆದು, ಬೋಧಕ ಸಿಬ್ಬಂದಿಗಳಿಗೆ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯ ಸರ್ಕಾರಿ ಆದೇಶ ಸಂಖ್ಯೆ:ಇಡಿ 37 ಯುಎನ್ಇ 2009 ದಿನಾಕ;24.12.2009 ರ ಮೂಲಕ ಜಾರಿಯಾಗಿದ್ದು, ವೇತನ ಶ್ರೇಣಿಯನ್ನು ಅನುಷ್ಠಾನಗೊಳಿಸಿ ಜಾರಿ ಮಾಡುವ ಸಂದರ್ಭದಲ್ಲಿ ಬೋಧಕ ಸಿಬ್ಬಂದಿಯವರು ಕಾರ್ಯ ನಿರ್ವಹಿಸುತ್ತಿದ್ದ ಹುದ್ದೆಯನ್ನು ಮರು ಪದನಾಮಗೊಳಿಸಿ, ಆ ಹುದ್ದೆಯಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ:01.01.2006 ರಿಂದ ಅನ್ವಯವಾಗುವಂತೆ ಸದರ ಆದೇಶದ Appendix-III ರ ಕಂಡಿಕೆ ಸಂಖ್ಯೆ.01 ರ ಉಪ ಕಂಡಿಕೆ A ದಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಅದರಂತೆ ಡಾ. (ಶ್ರೀಮತಿ) ವ್ಹಿ. ಆರ್. ಬೋಳಾರ ಇವರು ಆ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ "ಉಪನ್ಯಾಸಕ (ಆಯ್ಕೆ ಶ್ರೇಣಿ)" ಹುದ್ದೆಯಲ್ಲಿ ಮೂರು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ನಂತರದಲ್ಲಿ ಆ ಹುದ್ದೆಯನ್ನು ಈ ಕೆಳಗಿನಂತೆ ಮರುಪದನಾಮಗೊಳಿಸಿ, ಸದರಿ ಹುದ್ದೆಯಲ್ಲಿ ಅವರು ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ 2006 ರ ಪರಿಷ್ಕತ ಯುಜಿಸಿ ವೇತನ ಶ್ರೇಣಿಯ ವೇತನವನ್ನು ನಿಗದಿಪಡಿಸಲಾಗಿದೆಯೆ ಹೊರತು ಸದರಿಯವರಿಗೆ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೇವಾ ಸೌಲಭ್ಯಗಳನುಸಾರ ಪದೋನ್ನತಿ/ ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಿರುವುದಿಲ್ಲ ಎಂಬುದನ್ನು ಇಲ್ಲಿ ಸ್ಪಷ್ಟಿಕರಿಸಿ ತಮ್ಮ ಗಮನಕ್ಕೆ ತರಲಾಗಿದೆ. (ಈ ಕಚೇರಿ ಆದೇಶ ನಂ: 6215 ದಿನಾಂಕ: 27.10.2010) (ಅನುಬಂಧ- 'ಎಫ್')

| ಸಂ. | ಪದನಾಮ | 1996 ರ ಯುಜಿಸಿ ವೇತನ ಶ್ರೇಣಿಯ ವೇತನದಲ್ಲಿ ಪಡೆಯುತ್ತಿದ್ದ ಮೂಲ ವೇತನ/ದಿನಾಂಕ | 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನುಸಾರ ಮರು ಪದನಾಮಗೊಳಿಸಿ 1996 ರ ವೇತನ ಶ್ರೇಣಿಯಲ್ಲಿ ಪಡೆಯುತ್ತಿದ್ದ ಮೂಲ ವೇತನಕ್ಕೆ ಸಂವಾದಿಯಾಗಿ ದಿನಾಂಕ.01.01.2006 ರಿಂದ ಅನ್ವಯವಾಗುವಂತೆ ನಿಗದಿಪಡಿಸಲಾದ ಮೂಲ ವೇತನ/ದಿನಾಂಕ |
|---|---|---|---|
| 01. | ಉಪನ್ಯಾಸಕ (ಆಯ್ಕೆ ಶ್ರೇಣಿ) | ರೂ.12,420/- 31.12.2005 | ಸಹಾಯಕ ಪ್ರಾಧ್ಯಾಪಕರು ರೂ. 23,110+8000/- ರೂ.31,110/- 01.01.2006 |
| 02 | ಉಪನ್ಯಾಸಕ (ಆಯ್ಕೆ ಶ್ರೇಣಿ) | ರೂ. 13,680/- 15.11.2007 | ಸಹ ಪ್ರಾಧ್ಯಾಪಕರು ರೂ. 37,400+9000- ರೂ.46,400/- 15.11.2007 |

ಮಾನ್ಯ ಅಪರ ನಿರ್ದೇಶಕರು, ಕ.ರಾ.ಲೆ.ಪ & ಲೆ.ಪ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ, ಇವರು ತಮ್ಮ ಪತ್ರ ದಿನಾಂಕ.27.11.2018 ರಲ್ಲಿ ವಿಶ್ವವಿದ್ಯಾಲಯದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬಾಕಿ ಇರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ ಮಾನ್ಯ ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು ಇವರು ದಿನಾಂಕ.26.10.2018 ರ ತಮ್ಮ ಪತ್ರದಲ್ಲಿ ಈ ಕೆಳಕಾಣಿಸಿದಂತೆ ನಿರ್ದೇಶಿಸಿರುವುದಾಗಿ ತಿಳಿಸಿ, ಅದರಂತೆ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಇರುವ ಆಕ್ಷೇಪಣಾ/ ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಸಲ್ಲಿಸುವಂತೆ ತಿಳಿಸಿರುತ್ತಾರೆ.

*"ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣಾ/ವಸೂಲಾತಿ ಕಂಡಿಕೆಗಳ ಮೇಲೆ ಸೂಕ್ತ ಆಡಳಿತಾತ್ಮಕ ಕ್ರಮ ಕೈಗೊಂಡು, ಅನುಸರಣಾ ವರದಿಯನ್ನು ಮೂಲ ದಾಖಲಾತಿಗಳೊಂದಿಗೆ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಈ ಕಚೇರಿಗೆ ಸಲ್ಲಿಸಿ ಆಕ್ಷೇಪಿತ ಕಂಡಿಕೆಗಳ ತೀರುವಳಿ ಮಾಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆ. ಬಾಕಿ ಇರುವ ಎಲ್ಲಾ ವರ್ಷಗಳ ವರದಿಗಳಲ್ಲಿ ಕಾಣಿಸಿದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಇತ್ಯರ್ಥ ಪಡಿಸದಿರುವ ವಿಷಯವನ್ನು ಕೇಂದ್ರ ಕಚೇರಿಯಲ್ಲಿ ಜರುಗಿಸಿದ್ದ ದಿನಾಂಕ.19.11.2018 ರ ಸಭೆಯಲ್ಲಿ ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲು ನಿರ್ದೇಶಿಸಿದ್ದಾರೆ. ಕಾರಣ ಸದರಿ ನಿರ್ದೇಶನದನುಸಾರ ಲೆಕ್ಕ ಪರಿಶೋಧನಾ ಆಕ್ಷೇಪಿತ ಕಂಡಿಕೆಗಳಿಗೆ ದ್ವಿಪ್ರತಿಗಳಲ್ಲಿ ಅನುಸರಣಾ ವರದಿ ಸಲ್ಲಿಸಲು ಕೋರಿದೆ."*

ಮು.ತಿ.ನೋ.

15

ಸಾಂದರ್ಭಿಕವಾಗಿ ಇಲ್ಲಿ ಹೇಳುವುದಾದರೆ, ಪರಿಶೀಲನೆ ಸಂದರ್ಭದಲ್ಲಿ ಗಮನಿಸಲಾದ ಮೇಲ್ಕಂಡ ಪ್ರಮುಖ ಅಂಶಗಳನ್ನು ಲೆಕ್ಕ ಪರಿಶೋಧಕರ ಗಮನಕ್ಕೆ ತಂದು ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, **ಡಾ. (ಶ್ರೀಮತಿ) ವಿ.ಆರ್. ಬೋಳಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ** ಇವರ ಸೇವಾವಧಿಯಲ್ಲಿ ವಿಸ್ತರಿಸಲಾದ ವಿಸ್ತರಿಸಲಾದ 2006 ರ ಯುಜಿಸಿ ಪರಿಷ್ಕೃತ ವೇತನ ಶ್ರೇಣಿಯ ವೇತನವನ್ನು ನಿಗದಿಪಡಿಸಿ, ಅದರಂತೆ ವೇತನ, ವೇತನ ಭತ್ಯೆಗಳನ್ನು ಪಾವತಿಸಿದ ಕುರಿತಂತೆ ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗಳಿಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಯನ್ನು ಹಣಕಾಸು ಸಮಿತಿ ಪರಿಶೀಲನೆಗಾಗಿ ಮಂಡಿಸಲಾಗಿತ್ತು. ಸದರ ಹಣಕಾಸು ಸಮಿತಿಯು ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

**ಹಣಕಾಸು ಸಮಿತಿ ಸಭೆಯ ಠರಾವು ನಂ. 2 ದಿನಾಂಕ 16.09.2023**

"ಡಾ. (ಶ್ರೀಮತಿ) ವಿ.ಆರ್. ಬೋಳಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರಿಗೆ ಸೇವಾವಧಿಯಲ್ಲಿ ವಿಸ್ತರಿಸಲಾದ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೌಲಭ್ಯಗಳ ಹಾಗೂ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳ ಕುರಿತು ಮಾನ್ಯ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗೆ ಸಮರ್ಪಕ ದಾಖಲೆಗಳೊಂದಿಗೆ ಸಮರ್ಥನೀಯ ವಿವರಣೆಗಳನ್ನೊಳಗೊಂಡಂತೆ ಅನುಬಂಧದಲ್ಲಿ ಸಿದ್ಧಪಡಿಸಿದ ಸೂಕ್ತ ಹಾಗೂ ಸಮಂಜಸ ಅನುಸರಣೆಗೆ ಹಣಕಾಸು ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿ ಒಪ್ಪಿಗೆಯನ್ನು ಸೂಚಿಸಿತು."

ಮೇಲ್ಕಾಣಿಸಿದ ಅಂಶಗಳ ಹಿನ್ನಲೆಯಲ್ಲಿ, **ಡಾ. (ಶ್ರೀಮತಿ) ವಿ.ಆರ್. ಬೋಳಾರ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ** ಇವರಿಗೆ ಸೇವಾವಧಿಯಲ್ಲಿ ವಿಸ್ತರಿಸಲಾದ 2006 ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ಸೌಲಭ್ಯಗಳ ಹಾಗೂ ಪದೋನ್ನತಿ/ಸ್ಥಾನಿಕರಣ ಸೌಲಭ್ಯಗಳ ಕುರಿತು ಮಾನ್ಯ ಸರ್ಕಾರಿ ಲೆಕ್ಕ ಪರಿಶೋಧಕರು ವ್ಯಕ್ತಪಡಿಸಿದ ಆಕ್ಷೇಪಣೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿದ ಅನುಸರಣಾ ವರದಿಯನ್ನು ಹಾಗೂ ಈ ಬಗ್ಗೆ **ಹಣಕಾಸು ಸಮಿತಿ ಕೈಗೊಂಡ** ನಿರ್ಣಯವನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲನೆಗಾಗಿ ಮಂಡಿಸಲಾಗಿದೆ.

16

## ಆಡಳಿತ ಮಂಡಳಿಯ ಕಲಂ

06) ವಿಷಯ : ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ ಪ್ರಾಚಾರ್ಯರಿಗೆ ಸಹಕರಿಸಲು ತಲಾ ಒಬ್ಬ ಆಕ್ಯಾಡೆಮಿಕ್ ಡೀನ್ Academic Dean ರ ನೇಮಕ ಮಾಡುವ ಕುರಿತು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 10.08.2023 ರಂದು ಜರುಗಿದ ಎಲ್ಲ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಸಭೆಯಲ್ಲಿ ನಿರ್ಣಯಿಸಿದಂತೆ ಕ್ರಮ ಜರುಗಿಸುವ ಬಗ್ಗೆ ಸದರ ವಿಷಯವನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಉಪಕುಲಸಚಿವರು, ವಿದ್ಯಾಮಂಡಳ (ಎಸ್ & ಟಿ) ವಿಭಾಗ, ಕವಿವಿ, ಧಾರವಾಡ ಇವರ ದಿನಾಂಕ: **17.08.2023** ರ ಪತ್ರ ಸಂಖ್ಯೆ **KU/Aca(S&T)/OS-Gen/2023-24/853** ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ 5 ಅಧೀನ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಪ್ರಗತಿ ಹಾಗೂ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಕುರಿತಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಎಲ್ಲ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರ ಸಭೆಯು ದಿನಾಂಕ: 10.08.2023 ರಂದು ಜರುಗಿದ್ದು ಈ ಸಮಿತಿಯ ನಿರ್ಣಯಗಳ ಪೈಕಿ ಒಂದು ನಿರ್ಣಯ ಕರ್ನಾಟಕ ಕಲಾ/ವಾಣಿಜ್ಯ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ ಪ್ರಾಚಾರ್ಯರಿಗೆ ಸಹಕರಿಸಲು ಒಬ್ಬ **Academic Dean** ನೇಮಕ ಕುರಿತಂತೆ ನಿರ್ಣಯ ನಂ.09 ರಲ್ಲಿ ನಿರ್ಣಯಿಸಲಾಗಿರುತ್ತದೆ. ಈ ನೇಮಕವು ಯಾವುದೇ ಗೌರಧನವಿಲ್ಲದೇ ಮಹಾವಿದ್ಯಾಲಯಗಳ ಶೈಕ್ಷಣಿಕ ಪ್ರಗತಿಗೆ ಕರ್ತವ್ಯ ನಿರ್ವಹಿಸುವುದಾಗಿದ್ದು, ಪ್ರಸ್ತುತ ಇದ್ದ ಪೂರ್ಣಾವಧಿ ಬೋಧಕರಲ್ಲಿಯೇ ತಲಾ ಒಬ್ಬರನ್ನು ಎರಡೂ ಮಹಾವಿದ್ಯಾಲಯಗಳಿಗೆ **Academic Dean** ರ ನಿಯುಕ್ತಿ ಮಾಡಲು ಕುಲಪತಿಗಳ ಆದೇಶದಂತೆ ಪಿ.ಯು.ಸಿ ಸಂಯೋಜಕರ ನೇಮಕಾತಿ ಮಾಡಿದ ಮಾನದಂಡಗಳನ್ನು ಅನ್ವಯಿಸುವುದು ಎಂದು ತಿಳಿಸಿ ಇಚ್ಛೆಯುಳ್ಳ ಬೋಧಕರಿಂದ ಅರ್ಜಿ ಅಹ್ವಾನಿಸಿ ನೇಮಕ ಮಾಡಲು ವಿನಂತಿಸಿರುವರು ಹಾಗೂ ಸಮಿತಿಯ ನಡುವಳಿಗಳ ಪ್ರತಿಯನ್ನು ಲಗತ್ತಿಸಿರುತ್ತಾರೆ.

ಸದರ ವಿಷಯವಾಗಿ ನಿವೇದಿಸಿಕೊಳ್ಳುವುದೇನೆಂದರೆ, ಮಹಾವಿದ್ಯಾಲಯಗಳ ಪ್ರಗತಿ ಕೈಗೊಳ್ಳುವ ಬಗ್ಗೆ ವಿದ್ಯಾಮಂಡಳ (ಎಸ್ & ಟಿ) ವಿಭಾಗದ ಮುಖಾಂತರ ದಿನಾಂಕ:10.08.2023 ರಂದು ಜರುಗಿದ ಪ್ರಾಚಾರ್ಯರುಗಳ ಸಭೆಯಲ್ಲಿ ಈ ಕೆಳಗಿನಂತೆ ಅ. ನಂ. 09 ರಲ್ಲಿ ತೀರ್ಮಾನಿಸಲಾಗಿರುತ್ತದೆ.

> "ಮಹಾವಿದ್ಯಾಲಯಗಳ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ, ಪ್ರಾಚಾರ್ಯರಿಗೆ ಸಹಕರಿಸಲು ಒಬ್ಬ **Academic Dean** ರ ನೇಮಕ ಕುರಿತಂತೆ ಚರ್ಚಿಸಲಾಯಿತು. ಈ ಕುರಿತಂತೆ ಇಚ್ಛೆಪಟ್ಟ ಬೋಧಕರು ಗೌರವಧನವಿಲ್ಲದೇ **Academic Dean** ಆಗಿ ಕಾರ್ಯನಿರ್ವಹಿಸಲು ಆಸಕ್ತಿ ತೋರಿಸಿದಲ್ಲಿ ಅವರನ್ನು ನಿಯುಕ್ತಿ ಮಾಡುವುದು. ಕರ್ನಾಟಕ ಕಲಾ/ವಾಣಿಜ್ಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯರಗಳ **Academic Dean** ರ ನಿಯೋಜನೆಗೆ ಆಸಕ್ತಿ ತೋರಿದರು".

ಮುಂದುವರೆದು, ಕರ್ನಾಟಕ ಕಲಾ/ವಿಜ್ಞಾನ ಮಹಾವಿದ್ಯಾಲಯಗಳಲ್ಲಿ ನಡೆಯುವ ಪಿ.ಯು.ಸಿ ಕೋರ್ಸುಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ಪ್ರಾಚಾರ್ಯರಿಗೆ ಸಹಕರಿಸಲು ಸಂಯೋಜಕರ ನೇಮಕಾತಿ ಮಾಡಿದ ಕುರಿತಂತೆ ಅನುಸರಿಸಿದ ಮಾನದಂಡಗಳ ವಿವರ ಈ ಕೆಳಗಿನಂತಿದೆ.

> "ಮಹಾವಿದ್ಯಾಲಯದ ವಿಭಾಗವಾರು ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಚಟುವಟಿಕೆಗಳ ವಿಷಯದಲ್ಲಿ ಪ್ರಾಚಾರ್ಯರಿಗೆ ಸಹಾಯ ಮಾಡುವ ಉದ್ದೇಶದಿಂದ ಆಯಾ ವಿಭಾಗಗಳಿಗೆ

ಪು.ತಿ.ನೋ..

ಮುಖ್ಯಸ್ಥರು/ಸಂಯೋಜಕರನ್ನು ಈ ಕೆಳಗಿನ ಮಾರ್ಗಸೂಚಿಗಳ ಪ್ರಕಾರ ನೇಮಕ ಮಾಡುವ ಬಗ್ಗೆ ಆಯಾ ಪ್ರಾಚಾರ್ಯರುಗಳು ಅಧಿಕಾರವನ್ನು ಈ ಕಚೇರಿ ಪತ್ರ ಸಂಖ್ಯೆ. 28.06.2011 ರ ಮೂಲಕ ನೀಡಿರುವ ಕಾರ್ಯವಿಧಾನ ಈ ಕೆಳಗಿನಂತೆ ಇರುತ್ತದೆ.

1. The senior most Associate Professor shall be placed as head or co-ordinator for a period of two years from the date of assuming the charge. Wherever there is only one Associate Professor, he may be continued as Head/Co-ordinator till the other become eligible in the department.
2. In case Associate Professor is not there, the Assistant Professor irrespective of AGP as per seniority shall be placed as head or co-rodinator for a period of two years.
3. The existing Head/co-ordinator of the department who have already served in the position for 2 years should be replaced. Those who have not yet completed the tenure of two years, as Head/Co-ordinator, they are to be allowed to complete two years.
4. Wherever the present Head/Co-ordinator is junior in the seniority, the Associate Prfoessor next to the present Head/Co-ordinator shall be placed as Head/Co-ordinator till the last eligible teacher in the department. Then placement shall be made as per seniority of the concerned department. This cycle starts from July 2011.
5. However, the Principal, in consultation with the University authorities may change the assignments/period, if necessary.
6. Headship/Coordinatorship in the respective departments in Karnatak Arts and Science Colleges are not statutory posts and these are designations offered only as working arrangements for the smooth academic activities.

ಅಲ್ಲದೇ ಮಹಾವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ವಿಷಯಗಳ ಸಂಯೋಜಕರ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ವಹಿಸುವ ಅಧಿಕಾರವನ್ನು ಪ್ರಾಚಾರ್ಯರು, ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರಿಗೆ ನೀಡುವ ವಿಷಯವಾಗಿ ದಿನಾಂಕ.13.02.2015 ರ ಆದೇಶವು ತಿದ್ದುಪಡಿಗೊಂಡಂತೆ ಜಾರಿ ಮಾಡಲಾದ ದಿನಾಂಕ.20.02.2015 ರ ಈ ಕಚೇರಿ ಆದೇಶ ಪತ್ರ ಸಂಖ್ಯೆ.ಕವಿವಿ/ಸಿಆಸುವಿ/ಶಿಕ್ಷಕ/2015/4648 ರಲ್ಲಿ ಈ ಕೆಳಗಿನಂತೆ ವಿವರಿಸಿದ್ದು ಇರುತ್ತದೆ.

> "ಮುಂದುವರೆದು, ಪ್ರಾಚಾರ್ಯಾರು, ಕರ್ನಾಟಕ ಕಲಾ/ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರಿಗೆ ಮಹಾವಿದ್ಯಾಲಯದಲ್ಲಿರುವ ಸ್ನಾತಕೋತ್ತರ ಅಧ್ಯಯನ ವಿಷಯಗಳ ಮುಖ್ಯಸ್ಥರುಗಳ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ವಹಿಸುವ ಅಧಿಕಾರವನ್ನು ನೀಡಲಾಗಿದೆ ಹಾಗೂ ಆಯಾ ಮಹಾವಿದ್ಯಾಲಯಗಳ ಸಂಬಂಧಿಸಿದ ವಿಷಯಗಳ ಮುಖ್ಯಸ್ಥರುಗಳಿಗೆ ಸರದಿಯಂತೆ ಸ್ನಾತಕೋತ್ತರ ಅಧ್ಯಯನ ವಿಷಯಗಳ ಜವಾಬ್ದಾರಿಯನ್ನು ಸಹ ವಹಿಸಿಕೊಡಲು ಸಹ ಆದೇಶಿಸಲಾಗಿದೆ. ಸದರ ಹೆಚ್ಚುವರಿ ಕಾರ್ಯನಿರ್ವಹಣೆಗೆ ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸಹಾಯವನ್ನು ನೀಡಲಾಗುವುದಿಲ್ಲ."

ಆದರೆ, ಸದರ ಪ್ಯಾರಾದಲ್ಲಿ ನಮೂದಿಸಿದ ಮಾಹಿತಿಯನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ಓದಿಕೊಳ್ಳುವದು.

> "ಆಯಾ ಮಹಾವಿದ್ಯಾಲಯಗಳ ಸ್ನಾತಕೋತ್ತರ ವಿಷಯಗಳ ಖಾಯಂ ಶಿಕ್ಷಕ ಸಿಬ್ಬಂದಿಗಳಲ್ಲಿ ಜೇಷ್ಠತೆ ಆಧಾರದ ಮೇಲೆ ಸರದಿಯಂತೆ 2 ವರ್ಷಗಳ ಅವಧಿಗೆ ಮೀರದಂತೆ ಸ್ನಾತಕೋತ್ತರ ಅಧ್ಯಯನ ವಿಷಯಗಳ ಸಂಯೋಜಕರ ಜವಾಬ್ದಾರಿಯನ್ನು ಸಹ ವಹಿಸಿಕೊಡಲು ಆದೇಶಿಸಲಾಗಿದೆ. ಸದರ ಹೆಚ್ಚುವರಿ ಕಾರ್ಯನಿರ್ವಹಣೆಗೆ ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸಹಾಯವನ್ನು ನೀಡಲಾಗುವುದಿಲ್ಲ."

ಮು.ತಿ.ನೋ..

ಅಲ್ಲದೇ ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಹಾಗೂ ಪ್ರಾಚಾರ್ಯರು, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ ಇವರುಗಳಿಗೆ ಪಿ.ಯು.ಸಿ ತರಗತಿಗಳನ್ನು ಆಯಾ ವಿಭಾಗದ ಮುಖ್ಯಸ್ಥರು/ಪ್ರಾಚಾರ್ಯರಿಂದ ನಿರ್ವಹಿಸಲು ಕಷ್ಟವಾಗುತ್ತಿರುವುದರಿಂದ ಪದವಿ ಪೂರ್ವ (ಪಿ.ಯು.ಸಿ) ಕೋರ್ಸ್‌ಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡುವಂತೆ <u>ಮನವಿ ಪತ್ರಗಳ ಮೂಲಕ</u> ಪ್ರಾಚಾರ್ಯರು ವಿನಂತಿಸಿಕೊಂಡಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಆದೇಶದಂತೆ ಈ ವಿಷಯದ ಕುರಿತು ಪರಿಶೀಲಿಸಲು ಆಡಳಿತ ಮಂಡಳಿ ಸಭೆಗೆ ಕಲಂನ್ನು ತಯಾರಿಸಿ ಮಂಡಿಸಲಾಗಿತ್ತು. ಈ ಕುರಿತು ದಿನಾಂಕ: 25.02.2021 ರಂದು ಜರುಗಿದ ಆಡಳಿತ ಮಂಡಳಿ ಸಭೆಯು ಈ ಕೆಳಗಿನಂತೆ ನಿರ್ಣಯಿಸಿರುತ್ತದೆ.

<u>**ಆಡಳಿತ ಮಂಡಳಿ ನಿರ್ಣಯ ಸಂಖ್ಯೆ 38, ದಿನಾಂಕ : 25.02.2021**</u>

> **"ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಇಲ್ಲಿ ಜರುಗುವ ಪದವಿ ಪೂರ್ವ (ಪಿಯುಸಿ) ಕೋರ್ಸುಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಚಟುವಟಿಗಳನ್ನು ನೋಡಿಕೊಳ್ಳಲು ಪರ್ಯಾಯ ವ್ಯವಸ್ಥೆ ಮಾಡುವ ವಿಷಯದ ಕುರಿತು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ಸ್ವಇಚ್ಛೆಯಿಂದ ಜವಾಬ್ದಾರಿಯನ್ನು ವಹಿಸಿಕೊಳ್ಳುವವರನ್ನು ಸೂಕ್ತ ವಿಧಾನದಿಂದ ಗುರುತಿಸಿ ಸೂಕ್ತ ಅಧಿಕಾರ ಮತ್ತು ಜವಾಬ್ದಾರಿಗಳೊಂದಿಗೆ ಸಂಯೋಜಕರೆಂದು ನೇಮಿಸಲು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸಭೆಯು ಅಧಿಕಾರವನ್ನು ನೀಡಿತು."**

ಈ ನಿಟ್ಟಿನಲ್ಲಿ, ಮಹಾವಿದ್ಯಾಲಯದಲ್ಲಿ ವಿಭಾಗದ ಮುಖ್ಯಸ್ಥರನ್ನು ನೇಮಕ ಮಾಡುವ ರೀತಿಯಲ್ಲಿಯೇ ಸದರ ಸಿಂಡಿಕೇಟ್ ನಿರ್ಣಯದನುಸಾರ, ಸ್ವಇಚ್ಛೆಯಿಂದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಿಬ್ಬಂದಿಯವರನ್ನು ಸೂಕ್ತ ವಿಧಾನದಿಂದ ಗುರುತಿಸಿ ಸೂಕ್ತ ಅಧಿಕಾರ ಮತ್ತು ಜವಾಬ್ದಾರಿಗಳೊಂದಿಗೆ ಸಂಯೋಜಕರನ್ನು ನೇಮಿಸಲು ಮಾನ್ಯ ಕುಲಪತಿಗಳ ಅನುಮೋದನೆಗಾಗಿ ಕಡತವನ್ನು ಮಂಡಿಸಿ ಅನುಮೋದನೆ ಪಡೆದು, ಪಿಯುಸಿ ಕೋರ್ಸಗಳ ಸಂಯೋಜಕರ ನೇಮಕಾತಿ ಕುರಿತು ಮುಂದಿನ ಸೂಕ್ತ ಕ್ರಮ ಜರುಗಿಸುವಂತೆ ಸಂಬಂಧಿಸಿದ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಸೂಚಿಸಿ ಈ ಕಚೇರಿ ಪತ್ರಸಂಖ್ಯೆ. 356, ದಿನಾಂಕ: 08.06.2021 ರ ಮೂಲಕ ಕೋರಲಾಗಿತ್ತು.

ಮುಂದುವರೆದು, ಪ್ರಾಚಾರ್ಯರು, ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಪ್ರಾಚಾರ್ಯರು, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಇವರು ದಿನಾಂಕ: 08.06.2021 ರ ಈ ಕಚೇರಿ ಪತ್ರದಲ್ಲಿ ಸೂಚಿಸಿದನುಸಾರ, ಸಂಯೋಜಕರ ಜವಾಬ್ದಾರಿಯನ್ನು ಸ್ವಇಚ್ಛೆಯಿಂದ ವಹಿಸಿಕೊಳ್ಳಲು ಸಿದ್ಧರಿರುವ ಈ ಕೆಳಕಂಡ ಬೋಧಕ ಸಿಬ್ಬಂದಿಯವರ ಹೆಸರುಗಳನ್ನು ಸಂಯೋಜಕರೆಂದು ನೇಮಿಸಲು ಮಾನ್ಯ ಕುಲಪತಿಗಳ ಅನುಮೋದನೆಗಾಗಿ ಮಂಡಿಸಲಾಗಿದ್ದ ಪ್ರತ್ಯೇಕ ಕಡತದಲ್ಲಿ ಪ್ರಸ್ತಾಪಿಸಲಾದ ಆಸಕ್ತ ಬೋಧಕ ಸಿಬ್ಬಂದಿಗಳ ಪೈಕಿ ಒಬ್ಬರನ್ನು ಆಯ್ಕೆ ಮಾಡುವ ಸಂಬಂಧ ಕುಲಸಚಿವರ ಕಾರ್ಯಾಲಯದ ಪತ್ರ ಸಂಖ್ಯೆ.ಕೆಯು/ಕು.ಕಾ/2021-22/ ದಿನಾಂಕ: 06.11.2021 ರ ಮೂಲಕ ದಿನಾಂಕ: 08.11.2021 ರಂದು ಬೆಳಿಗ್ಗೆ 11 ಗಂಟೆಗೆ ಸಂದರ್ಶನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

<u>ಕರ್ನಾಟಕ ಕಲಾ ಮಹಾವಿದ್ಯಾಲಯ:</u>

1) ಡಾ.ಎಂ.ಕೆ.ವಿ. ಲಮಾಣಿ, ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಕ.ಕ.ಮ.ಧಾ.
2) ಡಾ.ಎಸ್.ಆರ್.ಗಣಿ, ಸಹಾಯಕ ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಕ.ಕ.ಮ.ಧಾ.

<u>ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ:</u>

1) ಡಾ.ಜಿ.ಎಚ್.ಮಳಿಮಠ, ಸಹ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಕ.ವಿ.ಮ.ಧಾ
2) ಡಾ.(ಶ್ರೀಮತಿ).ಡೋರಿಸ್.ಎಮ್.ಸಿಂಗ್, ಸಹ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಕ.ವಿ.ಮ.ಧಾ
3) ಡಾ.ಕೆ.ಕೊಟ್ರೇಶ್, ಸಹ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ಕ.ವಿ.ಮ.ಧಾ.

ಮು.ಶಿ.ನೋ..

ಪ್ರಸ್ತುತ, ಮಾನ್ಯ ಕುಲಪತಿಗಳು ಸಂದರ್ಶನದಲ್ಲಿ ಭಾಗವಹಿಸಿದ ಆಸಕ್ತ ಬೋಧಕ ಸಿಬ್ಬಂದಿಗಳನ್ನು ಸಂದರ್ಶಿಸಿ, ಸಭೆಯ ನಡುವಳಿಯ ಪ್ರಕಾರ ಆಯ್ಕೆಗೊಂಡ ಬೋಧಕ ಸಿಬ್ಬಂದಿಯವರನ್ನು ಸಂಯೋಜಕರೆಂದು ಕುಲಸಚಿವರು (ಆಡಳಿತ) ರವರು ನೇಮಕ ಮಾಡಿ ಕಚೇರಿ ಆದೇಶವನ್ನು ಜಾರಿ ಮಾಡುವಂತೆ ಹಾಗೂ ತದನಂತರ, ಮುಂದಿನ ಅವಧಿಗೆ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು ಸಂಯೋಜಕರ ನೇಮಕಾತಿ ಕುರಿತ ಪ್ರಕ್ರಿಯೆಯನ್ನು ದಿನಾಂಕ: 08.06.2021 ರ ಸಿ.ಆ.ಸು ವಿಭಾಗದ ಕಚೇರಿ ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ಶಿಕ್ಷಕ-6/2021/356 ರಲ್ಲಿ ತಿಳಿಸಿದನುಸಾರ ಕೈಗೊಳ್ಳುವಂತೆ ಪ್ರಾಚಾರ್ಯರಿಗೆ ಸೂಚನೆಯನ್ನು ನೀಡುವಂತೆ ಕುಲಪತಿಗಳ ಕಾರ್ಯಾಲಯದ ದಿನಾಂಕ: 25.11.2021 ರ ಟಿಪ್ಪಣಿಯಲ್ಲಿ ಆದೇಶಿಸಿಸಲಾಗಿತ್ತು.

ಈ ವಿಷಯವಾಗಿ ಕುಲಪತಿಗಳ ಕಾರ್ಯಾಲಯದ ಕಚೇರಿ ಟಿಪ್ಪಣಿ ದಿನಾಂಕ: 25.11.2021 ರಲ್ಲಿ ಕುಲಪತಿಗಳು ನಿರ್ದೇಶಿಸಿದಂತೆ ದಿನಾಂಕ: 08.11.2021 ರಂದು ಜರುಗಿದ ಸಂದರ್ಶನದ ನಡುವಳಿಯ ಪ್ರಕಾರ ಆಯ್ಕೆಗೊಂಡ ಈ ಕೆಳಕಂಡ ಬೋಧಕ ಸಿಬ್ಬಂದಿಯವರನ್ನು ಅವರ ಹೆಸರಿನ ಮುಂದೆ ತೋರಿಸಿದ ಪಿ.ಯು.ಸಿ ವಿಭಾಗದ ತರಗತಿಗಳ ಮೇಲುಸ್ತುವಾರಿ ನೋಡಿಕೊಳ್ಳಲು ಸಂಯೋಜಕರೆಂದು ನೇಮಕ ಮಾಡಿ ಆದೇಶಿಸಲಾಗಿರುತ್ತದೆ.

| ಅ.ಸಂ | ಬೋಧಕ ಸಿಬ್ಬಂದಿಗಳ ಹೆಸರು | ಪಿ.ಯು.ಸಿ ವಿಭಾಗದ ಹೆಸರು |
|---|---|---|
| 1) | ಡಾ.ಎಂ.ಕೆ.ವಿ.ಲಮಾಣಿ. ಸಹ ಪ್ರಾಧ್ಯಾಪಕರು, ಇಂಗ್ಲೀಷ್, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ | ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿನ ಕಲಾ ವಿಭಾಗದ ಪಿ.ಯು.ಸಿ ಕೋರ್ಸ್‌ಗಳು |
| 2) | ಡಾ.ಎಸ್.ಆರ್.ಗಣಿ. ಸಹ ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ | ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿನ ವಾಣಿಜ್ಯ ವಿಭಾಗದ ಪಿ.ಯು.ಸಿ ಕೋರ್ಸ್‌ಗಳು |
| 3) | ಡಾ.ಜಿ.ಎಚ್.ಮಳಿಮಠ, ಸಹ ಪ್ರಾಧ್ಯಾಪಕರು, ಭೌತಶಾಸ್ತ್ರ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, | ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯದಲ್ಲಿನ ಪಿ.ಯು.ಸಿ ವಿಭಾಗದ ಕೋರ್ಸ್‌ಗಳು |

ಸದರ ವಿಷಯವಾಗಿ ನಿವೇದಿಸಿಕೊಳ್ಳುವುದೇನೆಂದರೆ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ ಇಲ್ಲಿ ಜರುಗುವ ಪದವಿ ಪೂರ್ವ (ಪಿಯುಸಿ) ಕೋರ್ಸುಗಳ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ಸಂಯೋಜಕರ ನೇಮಕ ಮಾಡುವ ವಿಷಯವನ್ನು ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿ ತೆಗೆದುಕೊಂಡ ನಿರ್ಣಯದ ಪ್ರಕಾರ ಅನುಸರಿಸಿದ ಕಾರ್ಯವಿಧಾನದಂತೆ ಹಾಗೂ ದಿನಾಂಕ: 10.08.2023 ರಂದು ಜರುಗಿದ ಎಲ್ಲ ಅಧೀನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳ ಸಭೆಯಲ್ಲಿ ನಿರ್ಣಯಿಸಿದಂತೆ **ಪ್ರಸ್ತುತ ಕರ್ನಾಟಕ ಕಲಾ/ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಸಮರ್ಪಕ ನಿರ್ವಹಣೆಯಲ್ಲಿ ಪ್ರಾಚಾರ್ಯರುಗಳಿಗೆ ಸಹಕರಿಸಲು ತಲಾ ಒಬ್ಬ Academic Dean ರ ನೇಮಕ ಮಾಡುವ ವಿಷಯವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಗಿದೆ.**

20

# ಆಡಳಿತ ಮಂಡಳಿಯ ಕಲಂ

07 **ಕಲಂ. ಸಂ.__** ಸಿಂಡಿಕೇಟ ಹಾಗೂ ವಿದ್ಯಾವಿಷಯಕ್ ಪರಿಷತ್ ಸಭೆಗಳಿಗೆ ನಾಮನಿರ್ದೇಶನಗೊಳಸಲು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತಾ ಯಾದಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಸಂದರ್ಭದಲ್ಲಿ ಅರ್ಹತಾ ಮಾನದಂಡಗಳನ್ನು ಅಳವಡಿಸಲು ಡಾ. ರಾಜೇಂದ್ರ ನಾಯಕ ಇವರ ಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿ ಅನುಮೋದಿಸುವ ಕುರಿತು.

ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ದಿನಾಂಕ 18/04/2023 ರಂದು ಮಧ್ಯಾಹ್ನ 3:30 ಗಂಟೆಗೆ ನಿರ್ದೇಶಕರು, ಸಿಡಿಸಿ/ಸಂಯೋಜನಾ ವಿಭಾಗ ಕ.ವಿ.ವಿ. ಧಾರವಾಡ ಇವರ ಕೊಠಡಿಯಲ್ಲಿ ಸಿಂಡಿಕೇಟ ಹಾಗೂ ವಿದ್ಯಾವಿಷಯಕ್ ಪರಿಷತ್ ಸಭೆಗಳಿಗೆ ನಾಮನಿರ್ದೇಶನಗೊಳಸಲು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತಾ ಯಾದಿಗಾಗಿ ಅರ್ಜಿಗಳನ್ನು ಆಹ್ವಾನಿಸುವ ಸಂದರ್ಭದಲ್ಲಿ ಅರ್ಹತಾ ಮಾನದಂಡಗಳನ್ನು ಅಳವಡಿಸಲು ಡಾ. ರಾಜೇಂದ್ರ ನಾಯಕ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ಶಿಫಾರಸ್ಸುಗಳು ಈ ಕೆಳಗಿನಂತಿವೆ.

- ಯು.ಜಿ.ಸಿ. ನಿಯಮಾವಳಿಯ ಪ್ರಕಾರ ಪ್ರಾಚಾರ್ಯರು ಕನಿಷ್ಠ 15 ವರ್ಷ ಉಪನ್ಯಾಸಕರು/ಸಹಾಯಕ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಹಾಗೂ ಪ್ರಾಧ್ಯಾಪಕರೆಂದು ಸೇವೆ ಸಲ್ಲಿಸಿರುವುದು ಅವಶ್ಯವಾಗಿರುತ್ತದೆ.
- ಈಗಾಗಲೇ ಆಡಳಿತ ಮಂಡಳಿಯ ಸದಸ್ಯರು ಮತ್ತು ವಿದ್ಯಾವಿಷಯಕ್ ಸದಸ್ಯರೆಂದು ನೇಮಕವಾಗಿ ಸೇವೆ ಸಲ್ಲಿಸಿದ್ದಲ್ಲಿ ಅಂತಹ ಸದಸ್ಯರಿಗೆ 2ನೇ ಬಾರಿ ಅರ್ಜಿ ಸಲ್ಲಿಸಲು ಅವಕಾಶ ಇರುವುದಿಲ್ಲ.
- ಕಡ್ಡಾಯವಾಗಿ ಪಿಎಚ್.ಡಿ. ಪೂರ್ಣಗೊಳಿಸಿದ ಪ್ರಾಚಾರ್ಯರಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವುದು.
- ಅನುದಾನ ರಹಿತ ಹಾಗೂ ಅಧೀನ (Constituent) ಮಹಾವಿದ್ಯಾಲಯಗಳಲ್ಲಿ ಸೇವೆಯಲ್ಲಿರುವ ಪ್ರಾಚಾರ್ಯರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸದಿರುವುದು.

ಮುಂದುವರೆದು, ಸಮಿತಿಯು ಮುಂದಿನ ವರ್ಷ ಪ್ರಾಚಾರ್ಯರ ಜೇಷ್ಠತಾ ಯಾದಿಯ ಸಲುವಾಗಿ ಅರ್ಜಿ ಆಹ್ವಾನಿಸುವ ಸಂದರ್ಭದಲ್ಲಿ ಈ ಮೇಲ್ಕಂಡ ಮಾನದಂಡಗಳನ್ನು ಕಡ್ಡಾಯವಾಗಿ ಅನುಸರಿಸಿ ಅರ್ಜಿಗಳನ್ನು ಆಹ್ವಾನಿಸಬೇಕೆಂದು ಶಿಫಾರಸ್ಸು ಮಾಡಿದ್ದರಿಂದ (ಅರ್ಜಿ ನಮೂನೆಯನ್ನು ತಯಾರಿಸಲಾಗಿದೆ) ವಿಷಯವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

08 **ವಿಷಯ:** ಡಾ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರನ್ನು ನೇಮಕ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣಿ:**

ಡಾ. ಎನ್. ವಾಯ್. ಮಟ್ಟಿಹಾಳ, ಪ್ರಾಧ್ಯಾಪಕರು, ಡಾ. ಆರ್. ಸಿ. ಹಿರೇಮಠ ಅಧ್ಯಯನ ವಿಭಾಗ ಇವರ ವಿಭಾಗದ ಮುಖ್ಯಸ್ಥರ ಅಧಿಕಾರ ಅವಧಿಯು ದಿನಾಂಕ: 22.09.2023 ರಂದು ಕೊನೆಗೊಂಡ ಪ್ರಯುಕ್ತ ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ರ ಅಡಿಯಲ್ಲಿ ಜೇಷ್ಠತೆಯ ಅನುಸಾರ ಅರ್ಹ ಹಿರಿಯ ಶಿಕ್ಷಕರನ್ನು ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡುವುದು ಅವಶ್ಯವಿರುತ್ತದೆ.

ಸಿಬ್ಬಂದ್ದಿ ಮತ್ತು ಆಡಳಿತ ಸುಧಾರಣಾ ವಿಭಾಗದಿಂದ ಪೂರೈಸಲ್ಪಟ್ಟ ಡಾ. ಆರ್. ಸಿ. ಹಿರೇಮಠ ಅಧ್ಯಯನ ವಿಭಾಗದ ಪ್ರಸ್ತುತ ಶಿಕ್ಷಕರ ಜೇಷ್ಠತೆಯ ಯಾದಿಯ ಪ್ರಕಾರ ಡಾ. ಎನ್. ವಾಯ್. ಮಟ್ಟಿಹಾಳ, ಪ್ರಾಧ್ಯಾಪಕರು ಇವರ ನಂತರದ ಜೇಷ್ಠತೆಯಲ್ಲಿ ಡಾ. ಕೃಷ್ಣ ನಾಯಕ, ಪ್ರಾಧ್ಯಾಪಕರು, ಇವರಿದ್ದು ಸದರಿಯವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ ದಿನಾಂಕ: 23.09.2023 ರಿಂದ ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲು ಘಟಿಸುವುದು ಅಲ್ಲಿಯವರಗೆ ಅನ್ವಯವಾಗುವಂತೆ ಡಾ. ಆರ್. ಸಿ. ಹಿರೇಮಠ, ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರೆಂದು ನೇಮಕ ಮಾಡಿದ್ದು, ಅದರಂತೆ ದಿನಾಂಕ: 21.09.2023 ರಂದು ಅಧಿಸೂಚನೆ ಹೊರಡಿಸಲಾಗಿದೆ.

ಆದ್ದರಿಂದ, ಮೇಲಿನಂತೆ ಮುಖ್ಯಸ್ಥರ ನೇಮಕಾತಿ ಕುರಿತು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.